
# ಕಾನನ

ಜನವರಿ–2026

ನಿಸರ್ಗದೆಡೆಗೆ ಪಯಣ



WCG
Wildlife Conservation Group

# ಕಾನನ

## ನಿಸರ್ಗದೆಡೆಗೆ ಪಯಣ



© ಡಾ. ಅಶೋಕ್. ಕೆ. ಆರ್.

**ಪ್ರಧಾನ ಸಂಪಾದಕರು**

ಡಾ. ಅಶ್ವಥ ಕೆ. ಎನ್.

**ಮುಖ್ಯ ಸಂಪಾದಕರು**

ನಾಗೇಶ್ ಓ. ಎಸ್.

**ಸಹ ಸಂಪಾದಕರು**

ಧನರಾಜ್ ಎಂ.

ಮಹದೇವ ಕೆ. ಸಿ.

**ಸಂಪಾದಕೀಯ ತಂಡ**

ವಿಪಿನ್ ಬಾಳಿಗ ಬಿ. ಎಸ್.

ಆನಂದ್ ಎಸ್.

ಮುರಳಿ ಎಸ್.

ಹುಸೇನ್ ನೇಣಿಕೆ

ಸಂಗಮನಾಥ ಪಿ. ಸಜ್ಜನ

ಸುಕನ್ಯ

Wildlife Conservation Group

## ಲೇಖನಗಳು



* ಹುಲಿಯ ಜಾಡು ಹಿಡಿದು – ರಕ್ಷಾ
* ವನಸುಮ – ಕೆ. ಪಿ. ಶಂಕರಪ್ಪ, ಶಾಂತಮ್ಮ ಎಸ್.
* ವನಬಂಧ – 08 – ಸುಬ್ಬು ಬಾದಲ್
* ಹಿಮಾಲಯದ ತಪ್ಪಲಿನ ಚೆಂದದ ಹಕ್ಕಿಗಳು – ಗುರುಪ್ರಸಾದ್ ಕೆ. ಆರ್.
* ಹಾಡು ನಿಲ್ಲಿಸದ ಹಕ್ಕಿ! (ವಿವಿ ಅಂಕಣ) – ಜೈಕುಮಾರ್ ಆರ್.
* ಕಾನನದ ಆರ್ತನಾದ (ಕವನ) – ರಾಮಲಿಂಗ ಮಾಡಗಿರಿ
* ಪ್ರಕೃತಿ ಬಿಂಬ – ಶ್ರೀಕಾಂತ್ ಎ. ವಿ., ದೀಪ್ತಿ ಎನ್.



ಮುಖಪುಟ ಛಾಯಾಚಿತ್ರ
ಹುಲಿ

ಮುಖಪುಟ
ಗುರುಪ್ರಸಾದ್ ಕೆ. ಆರ್.

ವಿನ್ಯಾಸ
ಧನರಾಜ್ ಎಂ.

© ವಿಪಿನ್ ಬಾಳಿಗ ಬಿ. ಎಸ್.




# ಹುಲಿಯ ಜಾಡು ಹಿಡಿದು

**ಬಂಡೀಪುರ, ನಾಗರಹೊಳೆ ಸಫಾರಿಗೆ ತಾತ್ಕಾಲಿಕ ನಿಷೇಧ!**

ನಾನು ಮೈಸೂರಿಗೆ ಬಂದು ಸುಮಾರು ಆರು ತಿಂಗಳುಗಳು ಕಳೆಯುತ್ತಾ ಬಂದಿತ್ತು. ಎಲ್ಲರೂ ನನ್ನನ್ನು ಕೇಳುತ್ತಿದ್ದ ಪ್ರಶ್ನೆ ಒಂದೇ "ಬಂಡೀಪುರಕ್ಕೆ ಹೋಗಿಲ್ಲ್ವ ಇನ್ನೂ!?"... ಜೀವನ ಓದುವ ಹಂತದಿಂದ ದುಡಿಯುವ ಹಂತಕ್ಕೆ ಬಂದು ಮೈಸೂರಿಗೆ ತಂದು ನಿಲ್ಲಿಸಿತ್ತು. ಇಲ್ಲಿಗೆ ಬರೋದು ಖಾತರಿ ಆದಾಗಿನಿಂದಲೂ ಬಂಡೀಪುರ - ನಾಗರಹೊಳೆಯ ಕನಸು ಗರಿಗೆದರಿತ್ತು, ಆದರೆ ಇನ್ನೇನು ಎಲ್ಲಾ ರೂಢಿಯಾಗುತ್ತಾ ಸಮಯ ಮಾಡಿಕೊಂಡು ಹೋಗಬೇಕು ಅನ್ನುವಷ್ಟರಲ್ಲಿ ಸಫಾರಿ ನಿಷೇಧದ ಸುದ್ದಿ ಹೊರಹೊಮ್ಮಿತು.

**ಬಂಡೀಪುರ: ಇತಿಹಾಸ**

ಪಶ್ಚಿಮ ಘಟ್ಟ ಮತ್ತು ಪೂರ್ವ ಘಟ್ಟಗಳ ಸಮ್ಮಿಲನದ ಪ್ರದೇಶದಲ್ಲಿರುವ ಬಂಡೀಪುರ ಕರ್ನಾಟಕದಲ್ಲೇ ಅತೀ ಹೆಚ್ಚು ಆನೆ ಮತ್ತು ಹುಲಿಗಳಿಗೆ ಆವಾಸಸ್ಥಾನ. ಮೊದಲು 20ನೇ ಶತಮಾನದ ಆರಂಭದಲ್ಲಿ ಬಂಡೀಪುರ ಪ್ರದೇಶವು ಮೈಸೂರು ಸಾಮ್ರಾಜ್ಯದ ಮಹಾರಾಜರಿಗೆ ಖಾಸಗಿ ಬೇಟೆಯಾಡುವ ಮೀಸಲು ಸ್ಥಳವಾಗಿತ್ತು. 1931 ರಲ್ಲಿ, ಮೈಸೂರು ಮಹಾರಾಜರು 90 ಚದರ ಕಿಲೋಮೀಟರ್ (35 ಚದರ ಮೈಲಿ) ಪ್ರದೇಶವನ್ನು 'ವೇಣುಗೋಪಾಲ ವನ್ಯಜೀವಿ ಉದ್ಯಾನವನ' (Venugopala Wildlife Park) ಎಂದು ಘೋಷಿಸುವ ಮೂಲಕ ಸಂರಕ್ಷಣಾ ಕಾರ್ಯಕ್ಕೆ ಅಡಿಪಾಯ ಹಾಕಿದರು. 1973 ರಲ್ಲಿ, ಭಾರತ ಸರ್ಕಾರವು 'ಪ್ರಾಜೆಕ್ಟ್ ಟೈಗರ್' (Project Tiger) ಯೋಜನೆಯನ್ನು ಪ್ರಾರಂಭಿಸಿತು. ಈ ಯೋಜನೆಯಡಿಯಲ್ಲಿ, ವೇಣುಗೋಪಾಲ ವನ್ಯಜೀವಿ ಉದ್ಯಾನವನದ ಪ್ರದೇಶಕ್ಕೆ ಹೆಚ್ಚುವರಿ ಅರಣ್ಯ ಪ್ರದೇಶಗಳನ್ನು ಸೇರಿಸಿ, ಅದನ್ನು 'ಬಂಡೀಪುರ ಹುಲಿ ಮೀಸಲು ಪ್ರದೇಶ' (Bandipur

Tiger Reserve) ಎಂದು ಸ್ಥಾಪಿಸಲಾಯಿತು. 1986 ರಲ್ಲಿ, ಬಂಡೀಪುರ ರಾಷ್ಟ್ರೀಯ ಉದ್ಯಾನವನವು ನೆರೆಯ ನಾಗರಹೊಳೆ, ಮದುಮಲೈ ಮತ್ತು ವಯನಾಡ್ ವನ್ಯಜೀವಿ ಅಭಯಾರಣ್ಯಗಳೊಂದಿಗೆ ಸೇರಿ 'ನೀಲಗಿರಿ ಜೀವಗೋಳ ಮೀಸಲು ಪ್ರದೇಶ'ದ (Nilgiri Biosphere Reserve) ಒಂದು ಅವಿಭಾಜ್ಯ ಅಂಗವಾಯಿತು. ಇದು ದಕ್ಷಿಣ ಭಾರತದ ಅತಿದೊಡ್ಡ ಸಂರಕ್ಷಿತ ಪ್ರದೇಶ ಮತ್ತು ಕಾಡು ಆನೆಗಳ ಪ್ರಮುಖ ಆವಾಸಸ್ಥಾನ. ಕರ್ನಾಟಕದಲ್ಲೇ ಅತೀ ಹೆಚ್ಚು ಹುಲಿ ಸಾಂದ್ರತೆ ಇರುವ ಕಾರಣ ಜಗತ್ತಿನ ಮೂಲೆ ಮೂಲೆಯಿಂದ ಪ್ರವಾಸಿಗರನ್ನು ಬಂಡೀಪುರ ಕೈಬೀಸಿ ಕರೆಯುತ್ತದೆ. ಆದರೆ ಇದೇ ಹೆಮ್ಮೆಯ ಸಂಗತಿ ಇದೀಗ ರೈತರ ಆಕ್ರೋಶಕ್ಕೆ ಕಾರಣವಾಗಿದೆ.

## ಏನಿದು ಸಫಾರಿ ನಿಷೇಧ?

ಬಂಡೀಪುರದ ಅರಣ್ಯದಂಚಿನ ಗ್ರಾಮಗಳಲ್ಲಿ ಇತ್ತೀಚೆಗೆ ಹುಲಿ ದಾಳಿ ಪ್ರಕರಣಗಳು ಹೆಚ್ಚಾಗಿವೆ. ಕಳೆದ ಅಕ್ಟೋಬರ್ ಮತ್ತು ನವೆಂಬರ್ 2025 ರ ಅವಧಿಯಲ್ಲಿ, ಬಂಡೀಪುರ ಅರಣ್ಯದ ಸರಗೂರು ತಾಲ್ಲೂಕು ವ್ಯಾಪ್ತಿಯಲ್ಲಿ ನಡೆದ ಪ್ರತ್ಯೇಕ ಹುಲಿ ದಾಳಿಗಳಲ್ಲಿ ಮೂವರು ರೈತರು ಸಾವನ್ನಪ್ಪಿದ್ದಾರೆ.




ಮಾನವ-ವನ್ಯಜೀವಿ ಸಂಘರ್ಷ ಹೆಚ್ಚಿದ ಹಿನ್ನೆಲೆಯಲ್ಲಿ, ಕರ್ನಾಟಕದ ಅರಣ್ಯ ಸಚಿವರಾದ ಶ್ರೀ ಈಶ್ವರ್ ಖಂಡ್ರೆ ಸೂಚನೆಯ ಮೇರೆಗೆ ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತಾರಣ್ಯಗಳಲ್ಲಿ ಸಫಾರಿ ಚಟುವಟಿಕೆಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ.

## ಹುಲಿ ಪ್ರಕರಣಗಳ ಒಳನೋಟ

ಕಳೆದ ತಿಂಗಳು ನಡೆದ ಘಟನೆಗಳನ್ನು ಪರಿಶೀಲಿಸಿದಾಗ, ಮೊದಲ ಎರಡು ದಾಳಿಗಳಲ್ಲಿ ಹುಲಿಗಳು ತಮ್ಮ ಮರಿಗಳನ್ನು ರಕ್ಷಿಸಿಕೊಳ್ಳುವ ಪ್ರಯತ್ನದಿಂದಾಗಿ ನಡೆದಿವೆ ಎಂದು ತಿಳಿದುಬಂದಿದೆ. ಮೊದಲ ದಾಳಿಯು ಸಂತ್ರಸ್ತನು ಹೆಣ್ಣು ಹುಲಿ ಮತ್ತು ಅದರ ಮರಿಗಳ ಮೇಲೆ ಕಲ್ಲು ತೂರುತ್ತಿದ್ದ ವಿಚಾರ ವರದಿಯಾಗಿದೆ. ಎರಡು ವಾರಗಳ ನಂತರ ಬೇರೊಂದು ಹೆಣ್ಣು ಹುಲಿಯಿಂದ ನಡೆದ ಎರಡನೇ ದಾಳಿಯಲ್ಲಿ, ಮೂವರು ವ್ಯಕ್ತಿಗಳು ಹೊಲದಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಘರ್ಜನೆಯನ್ನು ಕೇಳಿದ್ದಾರೆ. ಇಬ್ಬರು ಸ್ಥಳದಿಂದ ಓಡಿಹೋದರು, ಆದರೆ ಸಂತ್ರಸ್ತನು ಹುಲಿ ಮರಿಗಳನ್ನು ಮುಟ್ಟಲು ಹತ್ತಿರ ಹೋದಾಗ ದಾಳಿ ನಡೆದು ಸಾವನ್ನಪ್ಪಿದ್ದಾನೆ. ಮೂರನೇ ದಾಳಿಯು ಸಂತ್ರಸ್ತನು ತನ್ನ ದನಗಳನ್ನು ರಕ್ಷಿಸಲು ಪ್ರಯತ್ನಿಸಿದಾಗ ಸಂಭವಿಸಿದೆ. (Source: The Hindu) ತಾಯಿ ಹುಲಿ ಯಾವಾಗಲೂ ಮರಿಗಳ ವಿಚಾರದಲ್ಲಿ ಉಗ್ರವಾಗುತ್ತದೆ. ಜನರು ತಿಳಿದೋ ತಿಳಿಯದೆಯೋ ಮಾಡುವ ಸಣ್ಣ ನಡೆ ಕೂಡ ಅಪಾಯ ತಂದೊಡ್ಡುತ್ತದೆ.





ಹೆಡಿಯಾಳ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಪರಮೇಶ್ ಅವರ ಪ್ರಕಾರ, ಪ್ರತಿ ವರ್ಷ ಈ ಪ್ರದೇಶಗಳಲ್ಲಿ ಹುಲಿಗಳ ಸಂಚಾರವು ಸಂತಾನೋತ್ಪತ್ತಿ ಅವಧಿಯಲ್ಲಿ ಬಹಳ ಸಾಮಾನ್ಯವಾಗಿದೆ. ಈ ವರ್ಷ, ಚಲನವಲನ ಸ್ವಲ್ಪ ಹೆಚ್ಚಾಗಿದೆ. ಅರಣ್ಯದ ಗಡಿಗಳ ಅತಿಕ್ರಮಣವು ಸಂಘರ್ಷದ ಹಿಂದಿನ ಕಾರಣಗಳಲ್ಲಿ ಒಂದಾಗಿದೆ ಎಂದು ಅವರು ತಿಳಿಸಿದ್ದಾರೆ.

ಅದೇ ರೀತಿ ರೈತರ ಪ್ರಕಾರ, ಕಾಡೊಳಗೆ ಹೆಚ್ಚಾಗುತ್ತಿರುವ ಸಫಾರಿಗಳಿಂದ ಕಾಡನ್ನು ತೊರೆದು ಹುಲಿಗಳು ನಾಡಿಗೆ ಬರುತ್ತಿವೆ ಎನ್ನುವುದು ಅವರ ವಾದ. ಅರಣ್ಯದಂಚಿನಲ್ಲಿರುವ ಜನರು ದನಗಳ ಮೇವು ಇತ್ಯಾದಿಗಳಿಗಾಗಿ ಅತಿಕ್ರಮಣ ಸಂಘರ್ಷಕ್ಕೆ ಕಾರಣ ಎನ್ನುವುದು ಅರಣ್ಯಾಧಿಕಾರಿಗಳ ವಾದ.

### ವಿಜ್ಞಾನಿಗಳ ಪ್ರಕಾರ

ಭಾರತದ ಹುಲಿಗಳ ಮೇಲೆ ಆಧುನಿಕ ರೀತಿಯಲ್ಲಿ ಸಂಶೋಧನೆ ನಡೆಸುತ್ತಿರುವ ಡಾ. ಉಲ್ಲಾಸ್ ಕಾರಂತರ ಪ್ರಕಾರ ಅತಿಯಾದ ಸಂರಕ್ಷಣಾ ಕ್ರಮಗಳಿಂದ, ಅಂದರೆ ಹುಲಿಗಳ ಸಂರಕ್ಷಣೆಗಾಗಿ ಕೃತಕ ಜಲಹೊಂಡಗಳ ನಿರ್ಮಾಣ, ಕೃತಕ ಹುಲ್ಲುಗಾವಲುಗಳ ನಿರ್ಮಾಣ ಇತ್ಯಾದಿಗಳಿಂದ ಹುಲಿಗಳ ಸಂಖ್ಯೆ ಅಸಹಜವಾಗಿ ಹೆಚ್ಚಾಗಿದೆ. ಆದರೆ ಕಾಡಿನ ಪ್ರಮಾಣ ಹೆಚ್ಚಾಗಿಲ್ಲ. ಹೀಗಿರುವಾಗ ಮಾನವ - ವನ್ಯಜೀವಿ ಸಂಘರ್ಷ ಹೆಚ್ಚುತ್ತದೆ. ಉಲ್ಲಾಸ್ ಕಾರಂತರ ಸಂಶೋಧನೆಯ ಪ್ರಕಾರ 100 ಚದರ ಕಿಲೋಮೀಟರ್ ನಲ್ಲಿ 7 ರಿಂದ 16 ಹುಲಿಗಳು ಇರುವುದು ಆರೋಗ್ಯಪೂರ್ಣ. ಆದರೆ ಬಂಡೀಪುರದಲ್ಲಿ 100 ಚದರ ಕಿಲೋಮೀಟರ್ ನಲ್ಲಿ 19.83 ಹುಲಿಗಳಿವೆ. ಹಾಗೆಯೇ ಬಂಡೀಪುರ ಮತ್ತು ನಾಗರಹೊಳೆ ಪ್ರದೇಶ ಕರ್ನಾಟಕದ ಶೇಕಡ 75 ರಷ್ಟು ಹುಲಿಗಳ ಆವಾಸಸ್ಥಾನ.

"ಅಧಿಕಾರಿಗಳ ನಿರಾಸಕ್ತಿ ಮತ್ತು ರಾಜಕಾರಣಿಗಳ ಅನಾಸಕ್ತಿಯಿಂದಾಗಿ, ಕಳೆದ 10 ವರ್ಷಗಳಲ್ಲಿ ಹುಲಿ ಸಂರಕ್ಷಿತ ಪ್ರದೇಶಗಳಿಂದ ಅರಣ್ಯ ವಾಸಿಗಳ ಸ್ವಯಂಪ್ರೇರಿತ ಸ್ಥಳಾಂತರ ಸಂಪೂರ್ಣ ಸ್ಥಗಿತಗೊಂಡಿದೆ. ಈ ವಿಷಯದಲ್ಲಿ ತಾರ್ಕಿಕ ಮತ್ತು ವೈಜ್ಞಾನಿಕ ಪ್ರತಿಕ್ರಿಯೆ ಸಿಗದಿದ್ದರೆ, ಮಾನವ-ಪ್ರಾಣಿ ಸಂಘರ್ಷ ಮತ್ತಷ್ಟು ಹೆಚ್ಚಾಗಲಿದೆ" ಎನ್ನುತ್ತಾರೆ.



**ಪರಿಹಾರ ಇದೆಯೇ?**

ಬಂಡೀಪುರದ ಆಕ್ರೋಶಿತ ರೈತರು ಹುಲಿ ಹಿಡಿಯುವ ಬೋನಲ್ಲಿ ಅರಣ್ಯ ಇಲಾಖೆಯ ಸಿಬ್ಬಂದಿಗಳನ್ನೇ ಸೆರೆ ಮಾಡಿದರು, ಅಧಿಕಾರಿಗಳ ಮೇಲೆ ದಾಳಿ, ಕಲ್ಲು ತೂರಾಟ, ಇತ್ಯಾದಿಗಳು ನಡೆದಿವೆ ಆದರೆ ಇದರಲ್ಲಿ ಪರಿಹಾರ ಇದೆಯೇ? ಕಾಡಂಚಲ್ಲಿ ಇರುವ ಸಮುದಾಯಗಳಿಗೆ ಜಾನುವಾರು ಸಾಕಾಣಿಕೆ ಬದಲಿ ಪರ್ಯಾಯ ಜೀವನೋಪಾಯ ನಿರ್ಮಿಸುವ ಕಾರ್ಯ ನಡೆಯಬೇಕು. ಉದಾಹರಣೆಗೆ ಬಿದಿರು ಮತ್ತು ಬೆತ್ತದ ಕೆಲಸ, ಕರಕುಶ ಕಲೆ, ಜೇನು ಸಾಕಾಣಿಕೆಯಂತಹ ಕೆಲಸಗಳ ತರಬೇತಿ ಮತ್ತು ಪ್ರೋತ್ಸಾಹ ಕಾಡಿನ ಮೇಲಿನ ಅವರ ಅವಲಂಬನೆ ಕಡಿಮೆಗೊಳಿಸುತ್ತದೆ. ಹೀಗೆ ಅವರ ಶಿಕ್ಷಣ ಮತ್ತು ಉನ್ನತಿ ಕಾಡಿನ ಸಂರಕ್ಷಣೆಯ ಅಂಗವಾಗಬೇಕು. ಕಾಡು ಮತ್ತು ವನ್ಯಜೀವಿಗಳು ಬರಿ ಇಲಾಖೆಯ ಸ್ವತ್ತು ಎನ್ನುವ ಭಾವನೆಯಿಂದ ನಾವು ಹೊರಬರಬೇಕು. ಕಾಡಿಂದಲೇ ನಾಡು ಎನ್ನುವ ವಿಚಾರ ಎಲ್ಲರ ಮನ ಮುಟ್ಟಬೇಕು. ಜನ ಸಾಮಾನ್ಯರು ಕಾಡಿನ ಗಡಿಗಳನ್ನು ಗೌರವಿಸಬೇಕು. ಅತಿಕ್ರಮಣ ಪ್ರವೇಶ, ಜಾನುವಾರು ಮೇವಿಗಾಗಿ ಕಾಡಿನ ಪ್ರವೇಶ, ವನ್ಯಜೀವಿಗಳನ್ನು ಕಂಡಾಗ ವರದಿ ಮಾಡಬೇಕೇ ಹೊರತು ಕುತೂಹಲದಿಂದ ಸಮೀಪಿಸುವುದು ಕುತ್ತು ತರುತ್ತದೆ.


© ಗುರುಪ್ರಸಾದ್ ಕೆ. ಆರ್.

ಹಾಗೆಯೇ ಕಾಡಿನಲ್ಲಿ ನೈಸರ್ಗಿಕವಾಗಿ ಬೇಟೆಯಾಗುವ ಹಾಗೂ ಬೇಟೆಯಾಡುವ ಪ್ರಾಣಿಗಳ ಸಂಖ್ಯೆಯನ್ನು ಪರಿಸರವೇ ನಿರ್ಧರಿಸಬೇಕು. ಕಾಡಿನಲ್ಲಿ ಅತಿಯಾದ ಲಂಟಾನದಂತಹ ಪರಾಯ ಸಸ್ಯಗಳ ಬೆಳವಣಿಗೆ ನಮ್ಮ ಸ್ಥಳೀಯ ಸಸ್ಯಗಳ ಬೆಳವಣಿಗೆಗೆ ತೊಂದರೆ ಉಂಟುಮಾಡುತ್ತದೆ. ಹಾಗಾಗಿ ಇವುಗಳ ನಿಯಂತ್ರಣ ಮೊದಲ ಗುರಿಯಾಗಬೇಕು. ಅತಿಯಾದ ಸಂರಕ್ಷಣಾ ಕ್ರಮಗಳು ಕೂಡ ಸಮತೋಲನವನ್ನು ಬಿಗಡಾಯಿಸುತ್ತಿದೆ.

**ಲೇಖನ: ರಕ್ಷಾ**

**ಉಡುಪಿ ಜಿಲ್ಲೆ**


© ಶ್ರೀನಿವಾಸ್ ಕೆ. ಎಸ್.


© ಶ್ರೀನಿವಾಸ್ ಕೆ. ಎಸ್.




# ಹಿಪ್ಪೆ ಮರ.

**Mahua tree**

***Madhuca longifolia***

ಹಿಪ್ಪೆ ಮರವನ್ನು ಸಾಮಾನ್ಯವಾಗಿ ರಸ್ತೆ ಬದಿಗಳಲ್ಲಿ ಸಾಲುಮರವಾಗಿ ಕಾಣಬಹುದು. ಕಾಡಿನ ಒಳಗೆ ಇದು ಕಡಿಮೆ ಕಾಣಸಿಕ್ಕರೂ ಕೆರೆಗಳ ಬಳಿ, ಗುಂಡುತೋಪುಗಳಲ್ಲಿ, ಹೊಲಗಳ ಎಲ್ಲೆಗಳಲ್ಲಿ ಈ ಮರಗಳನ್ನು ಹೆಚ್ಚು ಕಾಣಬಹುದಾಗಿದೆ. ಸದಾ ಹಸಿರು ಎಲೆಗಳನ್ನು ಹೊಂದಿರುವ ಈ ಸುಂದರವಾದ ಮರ ಹತ್ತು ಮೀಟರ್ ಎತ್ತರಕ್ಕೆ ಬೆಳೆಯುತ್ತದೆ. ಭಾರತದ ಕರ್ನಾಟಕ, ಗುಜರಾತ್, ಬಿಹಾರ, ಆಂಧ್ರ ಪ್ರದೇಶ, ಒಡಿಶಾ ಅಲ್ಲದೇ ನೇಪಾಳ, ಮಯಾನ್ಮಾರ್, ಶ್ರೀಲಂಕಾಗಳಲ್ಲಿಯೂ ಕಂಡು ಬರುತ್ತದೆ. ಇದರ ಬಲವಾದ ಕಾಂಡದ ಮೇಲೆ ಮಾಸಲು ಬೂದು- ತಿಳಿಕಂದು ಬಣ್ಣದ ತೊಗಟೆ ಇದ್ದು, ತೊಗಟೆಯ ಮೇಲೆ ಸಣ್ಣ ಸಣ್ಣ ಸೀಳುಗಳು ಇರುತ್ತವೆ. ಕಾಂಡವನ್ನು ಕೊರೆದರೆ ಹಾಲು ಹೊರ ಬರುತ್ತದೆ.

ಮರದ ಕೊಂಬೆಗಳ ತುದಿಗಳಲ್ಲಿ ಸರಳ ಪರ್ಯಾಯ ರಚನೆಯ ಎಲೆಗಳು ಗೊಂಚಲು ಗೊಂಚಲಾಗಿ ಇರುತ್ತವೆ. ಎಲೆಗಳು 15 ಸೆಂ.ಮೀ. ಉದ್ದವಿದ್ದು, ಎಲೆಯ ಮೇಲೆ ನಾಳಗಳ ರಚನೆ ಇರುತ್ತವೆ. ಚಿಗುರೆಲೆಗಳು ತಿಳಿ ಗುಲಾಬಿ ಬಣ್ಣದಲ್ಲಿದ್ದು, ಮೇಲೆ ಮೃದುವಾದ ರೋಮದಂತಹ ರಚನೆ ಇರುತ್ತದೆ. ಬಲಿತ ಎಲೆಗಳು ಗಾಢ ಹಸಿರು ಬಣ್ಣದಲ್ಲಿ ಇರುತ್ತವೆ. ಪ್ರೌಢ ಎಲೆಗಳ ತುದಿಯಲ್ಲಿ ಚೂಪಾದ ರಚನೆ ಇರುತ್ತದೆ. ಈ ಮರವು ಫೆಬ್ರುವರಿ-ಏಪ್ರಿಲ್ ನಲ್ಲಿ

ಎಲೆ ಉದಿರುಸುತ್ತದೆ. ಕಿರು ಕೊಂಬೆಗಳ ತುದಿಯಲ್ಲಿ. ಚಿಗುರೆಲೆಗಳ ಮಧ್ಯೆ ಉದ್ದ ತೊಟ್ಟಿನ ಕಡು ಬೂದು ಬಣ್ಣದ ಮೊಗ್ಗಿನ ಗೊಂಚಲು ನೇತಾಡುತ್ತವೆ. ಮೊಗ್ಗಿನ ಒಳಗೆ ಬೆಣ್ಣೆಯಂತಹ ಬಿಳಿಯ ಬಣ್ಣದ ಒತ್ತೊತ್ತಾಗಿ ಕೂಡಿದ ದಳಗಳ ರಚನೆ ಇರುತ್ತವೆ. ಹೂಗಳು 3 ಸೆಂ.ಮೀ. ಉದ್ದವಿರುತ್ತವೆ. ಮರ ಹೂ ಬಿಟ್ಟಾಗ ಸುತ್ತಲಿನ ವಾತಾವರಣದಲ್ಲಿ ಕಮ್ಮಗಿನ ಸುಗಂಧಭರಿತ ಸುವಾಸನೆ ತುಂಬುತ್ತದೆ. ಸಂಜೆಯಾಗುತ್ತಲೇ ಹೂವಿನ ದಳಗಳು ಕೆಳಗೆ ಉದುರಿ ಬೀಳುತ್ತವೆ. ಈ ಮರದ ಹೂಗಳನ್ನು ಹಲವು ಪ್ರಭೇದದ ಪಕ್ಷಿಗಳು, ಸಸ್ತನಿಗಳು ತಿನ್ನುತ್ತವೆ. ಬಲಿತ ಕಾಯಿಗಳು 2-5 ಸೆಂ.ಮೀ. ಉದ್ದ ಇರುತ್ತವೆ. ಮೊದಲು ಹಸಿರು ಬಣ್ಣದಲ್ಲಿ ಇರುವ ಈ ಕಾಯಿಗಳು ಹಣ್ಣಾದಾಗ ಮಾಸಲು ಕಿತ್ತಳೆ ಬಣ್ಣಕ್ಕೆ ತಿರುಗುತ್ತವೆ. ಪ್ರತೀ ಹಣ್ಣಿನಲ್ಲೂ ಕಾಫಿ ಬಣ್ಣದ 2-3 ಬೀಜಗಳು ಇರುತ್ತವೆ. ಬೀಜದ ಗಾತ್ರ ನಮ್ಮ ಕಿರು ಬೆರಳಿಗಿಂತ ಕೊಂಚ ದೊಡ್ಡದು. ಬೀಜದ ಉದ್ದ 3-5 ಸೆಂ. ಮೀ. ಇರುತ್ತದೆ. ಹಿಪ್ಪೆ ಬೀಜದ ಒಳಗಿನ ಪಪ್ಪನ್ನು ತಿನ್ನಲು ಕೂಡ ಬಳಸುತ್ತಾರೆ. ಇದರ ಬೀಜಗಳಿಂದ ತೆಗೆದ ಹಸಿರು - ಹಳದಿ ಬಣ್ಣದ ಹಿಪ್ಪೆ ಎಣ್ಣೆಯನ್ನು ದೇವರ ದೀಪಕ್ಕೆ ಬಳಸುತ್ತಾರೆ. ಹಿಪ್ಪೆ ಎಣ್ಣೆ ದೇವರ ಪೂಜೆಗೆ ಶ್ರೇಷ್ಠ ಎಂಬುದು ನಂಬಿಕೆ. ಹಿಪ್ಪೆ ಎಣ್ಣೆಯನ್ನು ಸೋಪು ಮತ್ತು ಕ್ಯಾಂಡಲ್ ತಯಾರಿಕೆಯಲ್ಲೂ ಬಳಸುತ್ತಾರೆ. ಎಣ್ಣೆ ತೆಗೆದ ಮೇಲೆ ಉಳಿಯುವ ಹಿಪ್ಪೆ ಹಿಂಡಿಯನ್ನು ಹೊಲಕ್ಕೆ ಗೊಬ್ಬರವಾಗಿ ಬಳಸುತ್ತಾರೆ. ಇದರ ಬೀಜಗಳನ್ನು 12 ಗಂಟೆಗಳ ಕಾಲ ನೀರಿನಲ್ಲಿ ನೆನೆಸಿಟ್ಟು ನಾಟಿ ಮಾಡಿದರೆ ಮೊಳಕೆ ಬರುತ್ತದೆ. ಸಂಜೆ ವೇಳೆ ಹಿಪ್ಪೆ ಮರ ಉದುರಿಸುವ ಹೂಗಳನ್ನು ಸಂಗ್ರಹಿಸಿ, ಕೊಳೆಯಿಸಿ ಒಳ್ಳೆ ಗಾಟಿನ ಹಳ್ಳಿಹೆಂಡವನ್ನು ತಯಾರಿಸುತ್ತಾರೆ.! ಈ ಕಾರಣದಿಂದಲೇ ಈಗಲೂ ಹೊಲಗಳ ಬದಿಗಳಲ್ಲಿ ಹಿಪ್ಪೆಮರ ಕಾಣಸಿಗುತ್ತದೆ. ಜೇನುಗಳಿಗೆ ಮಕರಂದ; ಪಕ್ಷಿಗಳಿಗೆ, ಸಸ್ತನಿಗಳಿಗೆ ಹೂವಿನ ಊಟ; ದೇವರ ಪೂಜೆಗೆ ದೀಪದ ಎಣ್ಣೆ; ದೇಹಕ್ಕೆ ಗಾಟು ಹಳ್ಳಿಹೆಂಡ; ಅಲ್ಲದೆ ಇದರ ಬೇರುಗಳು ನೆಲದಲ್ಲಿ ಅಗಲವಾಗಿ ಹರಡಿಕೊಂಡು ಮಣ್ಣನ್ನು ಹಿಡಿದುಕೊಳ್ಳುವುದರಿಂದ ಮಣ್ಣಿನ ಸವೆತವನ್ನು ತಡೆಯುತ್ತದೆ. ಇಷ್ಟೆಲ್ಲಾ ಉಪಯೋಗ ಇರುವ ಈ ಮರವನ್ನು ಮರ-ಮುಟ್ಟಿಗಾಗಿ ಯಾರೂ ಕಡಿಯುವುದಿಲ್ಲ! ಸಂರಕ್ಷಿಸಿ ಕಾಪಾಡಿಟ್ಟಿದ್ದರು. ಆದರೆ ರಸ್ತೆ ಬದಿಗಳಲ್ಲಿ ಸಾಲುಮರ ಆಗಿದ್ದ ಎಷ್ಟೋ ಬೃಹತ್ ಹಿಪ್ಪೆಮರ, ಇಂದು ಅಭಿವೃದ್ಧಿಯ ನೆಪದಲ್ಲಿ ರಸ್ತೆ ವಿಸ್ತರಣೆ ಆದಾಗ, ಬದಲಾಗುತ್ತಿರುವ ಭೂಬಳಕೆ ಕಾರಣದಿಂದಾಗಿ ಈ ಮರಗಳನ್ನು ಕಡಿದು ಸಾ ಮಿಲ್ಲುಗಳಿಗೆ ಸಾಗಿಸಲಾಗುತ್ತಿದೆ.










## ಔಷಧೀಯ ಗುಣಗಳು

ಹಿಪ್ಪೆ ಮರವನ್ನು ಹಲವು ಆದಿವಾಸಿ ಸಮುದಾಯಗಳು ಬೇರೆ ಬೇರೆ ಕಾಯಿಲೆಗಳ ಚಿಕಿತ್ಸೆಗಾಗಿ ಬಳಸುತ್ತಾರೆ. ಅದರ ಎಲ್ಲಾ ಔಷಧೀಯ ಬಳಕೆಗಳನ್ನು ಕೆಳಗೆ ನೀಡಲಾಗಿದೆ.

| **ಸಸ್ಯದ ಭಾಗ** | **ಆದಿವಾಸಿ ಸಮುದಾಯಗಳ ಹೆಸರು** | **ಔಷಧದ ವಿಧ** | **ಕಾಯಿಲೆ** | **ಔಷಧ ಸೇವಿಸುವ ವಿಧಾನ** |
|---|---|---|---|---|
| ಹೂವು | ಮಧ್ಯಪ್ರದೇಶದ ಚಿತ್ರಕೂಟ್ ಪ್ರದೇಶದ ಕೋಲ್, ಗೊಂಡ್ ಮತ್ತು ಮಾವಾಸಿ ಆದಿವಾಸಿಗಳು | ಹೂವಿನ ಕಷಾಯವನ್ನು ತಯಾರಿಸಲಾಗುತ್ತದೆ | ಕರುಗಳಲ್ಲಿ ಕಂಡುಬರುವ ಹೊಟ್ಟೆ ಹುಳು | ಕಷಾಯವನ್ನು ಕುಡಿಯುವುದು |
| ಹೂವು | ಝಾರ್ಖಂಡ್‌ನ ಸಂತಾಲ್‌ಪರ್ಗಣಾಸ್ ಹಾಗೂ ಪಶ್ಚಿಮ ಬಂಗಾಳದ ಬಿರ್ಭೂಮ್, ಬಂಕುರಾ, ಮಿಡ್ನಾಪುರ ಮತ್ತು ಪುರೂಲಿಯಾ ಪ್ರದೇಶದ ಸಂತಾಲ್ ಆದಿವಾಸಿಗಳು | ಹೂವಿನಿಂದ ಪಾನೀಯ / ಮದ್ಯ ತಯಾರಿಸಲಾಗುತ್ತದೆ | ಮಧುಮೇಹ (ಡಯಾಬಿಟಿಸ್) | ಪಾನೀಯವನ್ನು ಕುಡಿಯುವುದು |
| ಎಲೆಗಳು ಮತ್ತು ಒಣ ಹಣ್ಣುಗಳು | ಛತ್ತೀಸ್‌ಗಢ ಮತ್ತು ಗುಜರಾತ್‌ನ ಆದಿವಾಸಿಗಳು | ಎಲೆ ಮತ್ತು ಒಣ ಹಣ್ಣುಗಳ ಕಷಾಯ | ಮನುಷ್ಯರು ಮತ್ತು ಜಾನುವಾರುಗಳಲ್ಲಿ ಹಾಲು ಕಡಿಮೆ ಆಗುವುದು | ಕಷಾಯವನ್ನು ಕುಡಿಯುವುದು |
| ತೊಗಟೆ (ಬಾರ್ಕ್) | ಮಧ್ಯಪ್ರದೇಶದ ಅಂಧ್, ಬೈಗಾ, ಭಾರಿಯಾ ಆದಿವಾಸಿಗಳು | ತೊಗಟೆ ಕಷಾಯ | ಹಲ್ಲು, ಮೂಳೆಯ ಊತ | ಕಷಾಯದಿಂದ ಬಾಯಿ ತೊಳೆಯುವುದು |
| ಬೀಜಗಳು | ಮಧ್ಯಪ್ರದೇಶದ ಅಂಧ್, ಬೈಗಾ, ಭಾರಿಯಾ, ಭಟ್ರಾ, ಭಿಲ್, ಭುಜಿಯಾ, ಗೊಂಡ್ ಮೊದಲಾದ ಆದಿವಾಸಿಗಳು | ಬೀಜದ ಎಣ್ಣೆ | ನ್ಯುಮೋನಿಯಾ | ಎಣ್ಣೆಯನ್ನು ಎದೆ ಮೇಲೆ ಮಸಾಜ್ ಮಾಡುವುದು |
| ಬೀಜಗಳು | ಮಧ್ಯಪ್ರದೇಶದ ಅಂಧ್, ಬೈಗಾ, ಭಾರಿಯಾ, ಭಟ್ರಾ, ಭಿಲ್, ಭುಜಿಯಾ, ಗೊಂಡ್ ಮೊದಲಾದ ಆದಿವಾಸಿಗಳು | ಬೀಜದ ಕಷಾಯ | ಹಾವು ಕಚ್ಚಿದರೆ | ಕಷಾಯದ ಕೆಲವು ಹನಿಗಳನ್ನು ಮೂಗಿನೊಳಗೆ ಹಾಕುತ್ತಾರೆ |

**ಲೇಖನ: ಕೆ. ಪಿ. ಶಂಕರಪ್ಪ**
**ಶಾಂತಮ್ಮ ಎಸ್.**
ಬೆಂಗಳೂರು ಜಿಲ್ಲೆ

# ವನಬಂಧ – 08



**ಮೇಲಿನಿಂದ ಕೆಳಕ್ಕೆ**

1. ಮಂಗನಂತೂ ಖಂಡಿತಾ ಅಲ್ಲ, ಆದರೆ ಬಲು ಚಂದದ ಹಾಗೂ ದೊಡ್ಡ ಗಾತ್ರದ ಹಕ್ಕಿ (3)
2. ಚಿತ್ತಾರದಿಂದ ಕೂಡಿರುವ ಈ ಬೇಟೆಗಾರ ಪ್ರಾಣಿಯ ಅಂದಕ್ಕೇನೂ ಕೊರತೆ ಇಲ್ಲ. (3)
3. ಪಕ್ಷಿಗಳಿಗಿರುವ ಹಲವಾರು ಹೆಸರುಗಳಲ್ಲಿ ಇದೂ ಒಂದು (2)
4. ಕಳ್ಳತನವರಿಯದ ಸುಂದರವಾದ ಈ ಹಕ್ಕಿಗೆ ನೊಣಗಳು ಸಹ ಇಷ್ಟ (4)
5. ಉರಗ ಕುಲದಲ್ಲೊಬ್ಬಳು ರಾಣಿ (4)
6. ಕೈತೋಟದಲ್ಲಿ ಬೆಳೆಯುವ ಈ ಹೂವು ದಾಸರಿಗೆಲ್ಲ ಬಲು ಪ್ರೀತಿ (4)
7. ನಗರದಿಂದ ಕಣ್ಮರೆಯಾದ ಈ ಪುಟಾಣಿ ಹಕ್ಕಿ ಈಗ ಮರದಲ್ಲಿ ವಾಸಿಸುತ್ತಿದೆ (4)
8. ಕಪಿಯನ್ನು ತನ್ನ ಹೆಸರಿನಲ್ಲಿ ಅಡಗಿಸಿಕೊಂಡ ಈ ನದಿ ಕನ್ನಡ ನಾಡಿನಲ್ಲಿ ಹಲವು ಜೀವಗಳನ್ನು ಪೋಷಿಸುತ್ತಿದೆ (3)

**ಎಡದಿಂದ ಬಲಕ್ಕೆ**

1. ಕಟ್ಟೆಯ ಮೇಲೊಂದು ಪಾತರಗಿತ್ತಿ (2)
2. ರಣಬಿಸಿಲಿನಲ್ಲಿ ಕಳೇಬರಗಳನ್ನು ಸೇವಿಸಿ ಬದುಕುವ ಪಕ್ಷಿ (4)
3. ಒರೆಕೋರೆಯಾಗಿದ್ದರೂ ಸಿಹಿನೀರು ಒದಗಿಸುವ ನೈಸರ್ಗಿಕ ವ್ಯವಸ್ಥೆ (3)
4. ಕರ್ನಾಟಕದಲ್ಲಿ ಹುಲಿಗಳಿಗೆ ಹೆಸರುವಾಸಿಯಾದ ಅತಿ ಜನಪ್ರಿಯ ವನ್ಯಜೀವಿಧಾಮ (3)
5. ಹಾರುವ ಕತೆಯನ್ನು ಬಣ್ಣಿಸುವ ತವಕ ಈ ಕೀಟಕ್ಕೆ (2)
6. ರಾಮನಾಮ ಧ್ಯಾನಿಸುವ ಈ ಬಿಳಿ ಮೈಯ ಬೇಟೆಗಾರ ಹಕ್ಕಿಗೆ ಬಲು ಚಂದದ ಕಣ್ಣುಗಳಿವೆ (4)
7. ಕಪ್ಪು ಬಿಳುಪು ಮೈ ಬಣ್ಣದ ಈ ಪಕ್ಷಿಗೆ ಅಗಸನ ಹೆಸರಿನ ಹಂಗು ಯಾಕೋ ತಿಳಿಯದು (4)
8. ಮುಳುಗಿ ಏಳುವ ಕಾಯಕವೆಂದರೆ ಈ ಹಕ್ಕಿಗೆ ಬಲು ಖುಷಿ (5)

**ಕಾನನ ವನಬಂಧ -07 (ಡಿಸೆಂಬರ್ - 2025) ಉತ್ತರಗಳು:**

**ಮೇಲಿನಿಂದ ಕೆಳಗೆ:**

2. ಸುಗಂಧರಾಜ 3. ಗುಲಾಬಿ 6. ಗದಗ 9. ಯುಗಾದಿ 10. ರಜತ 11. ಪ್ಲಾಸ್ಮ 12. ಕ್ರಿಕೆಟ್ 14. ಗಂಧಕ.

**ಎಡದಿಂದ ಬಲಕ್ಕೆ:**

1. ಅನಾನಸು 4. ಗಂಜಲ 5. ತೇಗಗಂಧ 7. ಲಬಿ 8. ಜಟಾಯು 12. ಕ್ರಿಸ್ಮಸ್ 13. ದಿಗಂತ 15. ಅಂಟ್ ವಾಳ.

**ವನಬಂಧ - 06 ಅಂಕಣಕ್ಕೆ ಸರಿಯಾದ ಉತ್ತರ ಕೊಟ್ಟ ಎಲ್ಲರಿಗೂ ಧನ್ಯವಾದಗಳು**

1. ಸ್ವೀಕೃತಾ ಹೆಚ್. ಕೆ. (ಶಿವಮೊಗ್ಗ)
2. ಸೌಮ್ಯ (ದಕ್ಷಿಣ ಕನ್ನಡ)

**"ಈ ಮೇಲಿನ ವನಬಂಧವನ್ನು ಉತ್ತರಿಸಿ ನಮ್ಮ ವಿಳಾಸಕ್ಕೆ ಇದೇ ತಿಂಗಳ ದಿನಾಂಕ 20ರ ಒಳಗೆ ಕಳುಹಿಸಿ ಕೊಟ್ಟವರಿಗೆ ಪುಟ್ಟ ಬಹುಮಾನ ನೀಡಲಾಗುವುದು. (ಇ-ಮೇಲ್ ವಿಳಾಸಕ್ಕಾಗಿ ನೀವೂ ಕಾನನಕ್ಕೆ ಬರೆಯಬಹುದು ಅಂಕಣವನ್ನು ಓದಿ)"**

ವನಬಂಧ: ಸುಬ್ಬು ಬಾದಲ್

ಬೆಂಗಳೂರು ಜಿಲ್ಲೆ




# ಹಿಮಾಲಯದ ತಪ್ಪಲಿನ ಚೆಂದದ ಹಕ್ಕಿಗಳು

ಹಿಮಾಲಯದ ತಪ್ಪಲಿನಲ್ಲಿ ತುಂಗನಾಥ್ ಕೆಳಗೆ ಚಾರ್ದಾಮ್ ಗೆ ಹೋಗುವ ದಾರಿಯಲ್ಲಿ ಸಿಗುವ ಒಂದು ಪುಟ್ಟ ಊರು ಮಂಡಲ್. ಇಲ್ಲಿನ ಪ್ರಸಿದ್ಧಿ ಚಿಕ್ಕ ಚಿಕ್ಕ ಪಕ್ಷಿಗಳು ಮತ್ತು ಅವುಗಳ ವರ್ಣಮಯ ಬಣ್ಣಗಳು. ಉತ್ತರಕಾಂಡ ಪ್ರವಾಸದ ಐದನೇ ದಿನವಾದ ಅಂದು, ಚೋಪ್ತ ವ್ಯಾಲಿ ಮತ್ತೆ ತುಂಗನಾಥ್ ಮೇಲೆ ಹೊಸದಾಗಿ ಬಿದ್ದಿದ್ದ ಹಿಮದ ರಾಶಿಯಲ್ಲಿ ಮಿಂದೆದ್ದು, ಕೆಲವೊಮ್ಮೆ ರಾತ್ರಿಯಲ್ಲಿ -5 ಡಿಗ್ರಿ ಕೊರೆಯುವ ಚಳಿಯಲ್ಲಿ ರೂಮ್ ಹೀಟರ್ ಇಲ್ಲದೆ ಗಡಗಡ ನಡುಗಿ ಮಲಗಿದ್ದ ಅನುಭವ ಹೊತ್ತು ಸ್ವಲ್ಪ ಬೆಚ್ಚಗಿದ್ದ ಈ ಊರಿಗೆ ಬಂದಾಗ ಬಿಸಿಲು ನೋಡಿ ಮೈ ಮನಸ್ಸಿಗೆ ಸ್ವಲ್ಪಗೆಲುವು ಬಂದಿತ್ತು.

ಡಿಸೆಂಬರ್ ನ ಚುಮು ಚುಮು ಚಳಿಯ ಬೆಳಗಿನ ಜಾವ ಬೆಳಕು ಹರಿಯುವ ಮುಂಚೆಯೇ ಎದ್ದು ತಯಾರಾಗಿ ಗೈಡ್ ಜೊತೆ ಹೆಜ್ಜೆ ಹಾಕುತ್ತಾ ಈ ಹೊಸ ಪ್ರದೇಶವನ್ನು ಆಸ್ವಾದಿಸುತ್ತಿದ್ದೆವು. ಮಬ್ಬುಗತ್ತಲು ಸುತ್ತಲಿನ ಪ್ರದೇಶವನ್ನೆಲ್ಲಾ ಆವರಿಸಿತ್ತು. ಸಮಯ ಸರಿ ಸುಮಾರು 6 ಘಂಟೆ ಆಗಿರಬಹುದು ನಿಧಾನಕ್ಕೆ ಬೆಳಕು ಬರಲು ಶುರುವಾಗಿತ್ತು. ನಮ್ಮೊಡನಿದ್ದ ಗೈಡ್ ರಾಹುಲ್ ಆ ಮಬ್ಬು ಬೆಳಕಿನಲ್ಲಿಯೇ ಬೈನ್ಯಾಕುಲರ್ ಹಿಡಿದು ಯಾವುದೋ ಮರಗಳ ಮೇಲೆ ನೋಡುತ್ತಾ ಇದ್ದ. ಈ ಮಬ್ಬಿನಲ್ಲಿ ಇವನಿಗೆ ಏನು ಕಾಣಿಸುತ್ತಿದೆ ಎಂದು ನಾವು ಚಕಿತಗೊಂಡು ಅವನನ್ನೇ ನೋಡುತ್ತಿದ್ದೆವು. ಇದ್ದಕ್ಕಿದ್ದಂತೆ ಅವನು ನಮಗೆ ಕೈ ಸನ್ನೆ ಮಾಡಿ ಕ್ಯಾಮೆರಾ ತಯಾರಿ ಮಾಡಿಕೊಳ್ಳುವಂತೆ ಹೇಳಿದ. ಆ ಪ್ರದೇಶಗಳಲ್ಲಿ ಹೆಚ್ಚು ಓಡಾಡಿ ಅನುಭವ ಇದ್ದ ಅವನ ಮಾತನ್ನು ನಾವು ಅಲಕ್ಷಿಸುವಂತಿರಲಿಲ್ಲ. ಅವನ ನಿರ್ದೇಶನದಂತೆ ನಮ್ಮ ಕ್ಯಾಮೆರಾಗಳನ್ನು ತಯಾರು ಮಾಡಿಕೊಂಡೆವು. ಕೆಲವು ಸಮಯದ ನಂತರ 'ಎದುರಿಗೆ ಕಾಣುತ್ತಾ ಇದ್ದ ಮರದ ಮೇಲೆ ಫೋಕಸ್ ಮಾಡಿ ಬೇಗ' ಎಂದ ಅವನಿಗೆ ಯಾವುದೋ ಒಂದು ಪಕ್ಷಿ ಬರುವ ಮುನ್ಸೂಚನೆ

ಸಿಕ್ಕಿತ್ತು, ಆದರೆ ನಮ್ಮ ಕಣ್ಣಿಗಂತೂ ಏನೂ ಕಾಣಿಸುತ್ತಿರಲಿಲ್ಲ. ಒಂದ್ಯೆದು ನಿಮಿಷಗಳ ನಂತರ ಗೈಡ್ ರಾಹುಲನು 'ಉದರ್ ದೇಕೊ... ಉದರ್ ದೇಕೊ ... ಆಗಯ ... ಆಗಯ ...' ಎಂದು ಹರ್ಷೋದ್ಗಾರದಲ್ಲಿ ಆ ಮರದ ಕಡೆಯೇ ಕೈ ತೋರಿಸಿದ. ಅಲ್ಲಿಯ ತನಕ ಇವನ ನಿರ್ದೇಶನದಂತೆ ನಡೆದುಕೊಳ್ಳುತ್ತಿದ್ದರೂ ಅಷ್ಟು ಗಣನೆಗೆ ತೆಗೆದುಕೊಂಡಿರದ ನಮಗೆ ಆ ಮುಂಜಾವಿನ ಸೊಬಗನ್ನು ನೋಡಿ ಸ್ವರ್ಗವೇ ಕೆಳಗಿಳಿದಂತಾಯಿತು. ಎಲ್ಲಿದ್ದವೋ ಪುಟ್ಟ ಕೆಂಪು ಪಕ್ಷಿಗಳ ಗುಂಪು... ಸರ್ರ್ ಸರ್ರ್ ಎಂದು ಹಾರಿ ಬಂದು ನಮ್ಮ ಎದುರಿಗಿದ್ದ ಮರಗಳ ಮೇಲೆ ಕುಳಿತವು. ಹಲವಾರು ಪಕ್ಷಿಗಳು ಅಲ್ಲಿ ಕುಳಿತಿದ್ದವು. ಅವುಗಳ ಮೈ ಬಣ್ಣಕ್ಕೆ ನಾನು ಮನಸೋತು ಹೋದೆ. ಸುತ್ತಲಿನ ಎಲ್ಲರ ಮುಖದಲ್ಲೂ ಮಂದಹಾಸ. ಎಲ್ಲರೂ ಈ ಅದ್ಭುತ ವರ್ಣರಂಜಿತ ಜೀವಿಗಳನ್ನು ತಮ್ಮ ಕ್ಯಾಮೆರಾಗಳಲ್ಲಿ ಸೆರೆಹಿಡಿಯುತ್ತಿದ್ದರು ನನ್ನನ್ನು ಸೇರಿ. ರಾತ್ರಿಯ ವೇಳೆ ದಟ್ಟವಾದ ಮರಗಳಲ್ಲಿ ಇದ್ದ ಈ ಚಿತ್ರ ಪಕ್ಷಿಗಳ ಗುಂಪು ಬೆಳಕಾಗುತ್ತಿದ್ದಂತೆ ನಿಧಾನಕ್ಕೆ ಹೊರಬರಲು ಶುರುಮಾಡಿದವು. ಅಲುಗಾಡದೆ ಕುಳಿತಿದ್ದ ಒಂದೆರಡು ಪುಟ್ಟ ಪಕ್ಷಿಗಳಂತೂ ಕೆಂಪು ಹಣ್ಣಿನ ರೀತಿಯೇ ಕಾಣುತ್ತಿದ್ದವು. ನಮ್ಮಿಂದ ಅನತಿ ದೂರದಲ್ಲಿದ್ದ ಅವುಗಳನ್ನು ಕಣ್ಣಾರೆ ನೋಡಿ ಕ್ಯಾಮೆರಾದಲ್ಲಿ ಫೋಟೋ ಕ್ಲಿಕ್ಕಿಸಿಕೊಂಡು ಅವುಗಳ ಚಲನ ವಲನಗಳನ್ನು ರೆಕಾರ್ಡ್ ಮಾಡಿಕೊಳ್ಳುತ್ತಿದ್ದೆವು. ಹೀಗೆ ಇವು ನಮ್ಮ ಕಣ್ಣು ಮುಂದೆ ಸುಮಾರು ನಾಲ್ಕರಿಂದ ಐದು ನಿಮಿಷ ಅಷ್ಟೇ ಇದ್ದದ್ದು, ನಂತರ ಅವುಗಳು ಆಹಾರ ಹುಡುಕಿಕೊಂಡು ಅಲ್ಲೇ ಇದ್ದ ಕೆಳಗಿನ ಪೊದೆಗಳ ಒಳಗೆ ಮಾಯವಾದವು. ಈ ಸನ್ನಿವೇಶದ ಬಗ್ಗೆ ಮುಂಚೆಯೇ ತಿಳಿದಿದ್ದ ನಮ್ಮ ಗೈಡ್ ಸರಿಯಾದ ಸಮಯಕ್ಕೆ ನಮ್ಮನ್ನು ಅಲ್ಲಿಗೆ ಕರೆದುಕೊಂಡು ಬಂದಿದ್ದ. ಎಂತಹ ಅದ್ಭುತ ಪುಟ್ಟ ಹಕ್ಕಿ ಅವು! ಪದಗಳಲ್ಲಿ ಅದನ್ನು ವರ್ಣಿಸಲಾಗದು ಕಣ್ಣಾರೆ ನೋಡಿಯೇ ಸವಿಯಬೇಕು. ಸ್ವಲ್ಪ ಹೊತ್ತು ಬೇರೆ ಬೇರೆ ಪಕ್ಷಿ ಹುಡುಕಾಟದ ನಂತರ, ಮತ್ತೆ ಇನ್ನಷ್ಟು ಈ ಪ್ರಭೇದದ ಪಕ್ಷಿಗಳನ್ನು ಕಂಡು ಎಲ್ಲರು ಪುಳಕಿತರಾದೆವು. ಈ ಪಕ್ಷಿಗಳು ತುಂಬಾ ನಾಚಿಕೆ ಸ್ವಭಾವದವು. ಹತ್ತಿರದಲ್ಲಿ ಕಾಣಿಸುವುದು ಬಲು ಅಪರೂಪ. ಒಂದಷ್ಟು ಒಳ್ಳೆಯ ಫೋಟೋಗಳನ್ನು ತೆಗೆದು ಚಿತ್ರಪಕ್ಷಿ (scarlett finch) ಗಳಿಗೆ ಟಾಟಾ ಹೇಳಿ ಮುಂದುವರಿದೆವು...

ಸ್ವಾಭಾವಿಕವಾಗಿ "ಸ್ಕಾರ್ಲೆಟ್ ಫಿಂಚ್" ಎಂದು ಕರೆಯಲ್ಪಡುವ ಈ ಪಕ್ಷಿಯು, ಫಿಂಚ್ (Fringillidae) ಕುಟುಂಬಕ್ಕೆ ಸೇರಿದ ಒಂದು ಸುಂದರವಾದ ಚಿಕ್ಕ ಹಕ್ಕಿಯಾಗಿದೆ. ಇದರ ವೈಜ್ಞಾನಿಕ ಹೆಸರು ಕಾರ್ಪೊಡಕಸ್ ಸಿಪಹಿ (Carpodacus sipahi) ಎಂದು.






**ರೂಪ ಮತ್ತು ವಿವರಣೆ:**

**ಗಂಡು ಹಕ್ಕಿ (Male):** ಇದರ ತಲೆ, ದೇಹದ ಮೇಲ್ಭಾಗ ಮತ್ತು ಕೆಳಭಾಗವು ಕಡು ಕೆಂಪು (ಸ್ಕಾರ್ಲೆಟ್) ಬಣ್ಣದಿಂದ ಕೂಡಿರುತ್ತದೆ. ಗಾಢ ಕಪ್ಪು ರೆಕ್ಕೆಗಳು ಮತ್ತು ಬಾಲವು ಇದಕ್ಕೆ ವ್ಯತಿರಿಕ್ತವಾಗಿ ಕಾಣುತ್ತದೆ ಮತ್ತು ಕೆಂಪು ಅಂಚುಗಳನ್ನು ಹೊಂದಿರುತ್ತದೆ.

**ಹೆಣ್ಣು ಹಕ್ಕಿ:** ಇದು ಗಂಡಿನಷ್ಟು ಆಕರ್ಷಕವಾಗಿರುವುದಿಲ್ಲ, ಹೆಚ್ಚಾಗಿ ಮಸುಕಾದ ಆಲಿವ್-ಹಳದಿ ಅಥವಾ ಆಲಿವ್-ಕಂದು ಬಣ್ಣವನ್ನು ಹೊಂದಿರುತ್ತದೆ ಮತ್ತು ಹೊಳೆಯುವ ಹಳದಿ ಪುಷ್ಠ (rump) ಹೊಂದಿರುತ್ತದೆ.

**ಗಾತ್ರ:** ಶಂಕುವಿನಾಕಾರದ ಕೊಕ್ಕನ್ನು ಹೊಂದಿರುವ ಮಧ್ಯಮ ಗಾತ್ರದ ಫಿಂಚ್ ಆಗಿದ್ದು, ಸುಮಾರು 17–19 ಸೆಂ. ಮೀ ಉದ್ದವಿರುತ್ತದೆ.

**ಆವಾಸ ಮತ್ತು ಹಂಚಿಕೆ:**




ಇದು ಮುಖ್ಯವಾಗಿ ಹಿಮಾಲಯ ಪರ್ವತ ಶ್ರೇಣಿಗಳಲ್ಲಿ ಕಂಡುಬರುತ್ತದೆ. ಭಾರತದ ಉತ್ತರಾಖಂಡ ರಾಜ್ಯದಿಂದ ಪೂರ್ವಕ್ಕೆ ನೇಪಾಳ, ಈಶಾನ್ಯ ಭಾರತದ ಬೆಟ್ಟಗಳು ಮತ್ತು ಆಗ್ನೇಯ ಏಷ್ಯಾದಲ್ಲಿ ಥೈಲ್ಯಾಂಡ್‌ನವರೆಗೂ ವ್ಯಾಪಿಸಿದೆ.

ಇದು ಸಮಶೀತೋಷ್ಣ ಕಾಡುಗಳಲ್ಲಿ ವಾಸಿಸುತ್ತದೆ. ಸಂತಾನೋತ್ಪತ್ತಿ ಅವಧಿಯಲ್ಲಿ (ಸುಮಾರು 1400–3550 ಮೀ. ಎತ್ತರದಲ್ಲಿ) ತೆರೆದ ಪರ್ವತ ಪ್ರದೇಶದ ಕಾಡುಗಳಲ್ಲಿ ಕಂಡುಬರುತ್ತದೆ. ಚಳಿಗಾಲದಲ್ಲಿ, ಅನೇಕ ಪಕ್ಷಿಗಳು ದಕ್ಷಿಣಕ್ಕೆ ಮತ್ತು ಕೆಳಮಟ್ಟದ ಓಕ್ ಕಾಡುಗಳು ಅಥವಾ ತಪ್ಪಲು ಪ್ರದೇಶಗಳಿಗೆ ವಲಸೆ ಹೋಗುತ್ತವೆ.

**ಆಹಾರ:** ಇದು ಪ್ರಧಾನವಾಗಿ ಬೀಜಗಳು, ಮೊಗ್ಗುಗಳು, ಹಣ್ಣುಗಳು ಮತ್ತು ಸಣ್ಣ ಹಣ್ಣುಗಳನ್ನು ತಿನ್ನುತ್ತದೆ. ಸಂತಾನೋತ್ಪತ್ತಿ ಸಮಯದಲ್ಲಿ ಪ್ರೋಟೀನ್‌ಗಾಗಿ ಸಾಂದರ್ಭಿಕವಾಗಿ ಸಣ್ಣ ಕೀಟಗಳನ್ನು ಸಹ ಸೇವಿಸುತ್ತದೆ.

ಈ ನಮ್ಮ ಪಕ್ಷಿ ವೀಕ್ಷಣಾ ಪ್ರವಾಸದಲ್ಲಿ ಈ ಪಕ್ಷಿಯು ನಮ್ಮೆಲ್ಲರನ್ನೂ ಮಂತ್ರ ಮುಗ್ದರನ್ನಾಗಿಸಿ ಅದರ ಸೌಂದರ್ಯದಿಂದ ಪಕ್ಷಿವೀಕ್ಷಣೆಯ ಬಗ್ಗೆ ಹಾಗೂ ಅವುಗಳ ಛಾಯಾಗ್ರಹಣದ ಬಗ್ಗೆ ನಮ್ಮೆಲ್ಲರಲ್ಲಿ ಇನ್ನಷ್ಟು ಆಸಕ್ತಿ ಮೂಡುವಂತೆ ಮಾಡಿದ್ದು ಸುಳ್ಳಲ್ಲ. ಈ ಅದ್ಭುತ ಜೀವಿಗಳನ್ನು ನಾವು ಮುಂದೆಯೂ ಇಷ್ಟೇ ಆನಂದದಿಂದ ನೋಡಬೇಕಾದರೆ ಪರಿಸರವನ್ನು ಉಳಿಸಿಕೊಳ್ಳಬೇಕಾದದ್ದು ನಮ್ಮೆಲ್ಲರ ಕರ್ತವ್ಯ ಅಲ್ಲವೇ?




ಲೇಖನ: ಗುರುಪ್ರಸಾದ್ ಕೆ. ಆರ್.
ಬೆಂಗಳೂರು ಜಿಲ್ಲೆ






# ಹಾಡು ನಿಲ್ಲಿಸದ ಹಕ್ಕಿ!

ಪಕ್ಷಿ ವೀಕ್ಷಣೆ ಅನ್ನೋದು ಮೊದಲಿನಿಂದಲೂ ನನಗೆ ಇಷ್ಟವಾದ ಹವ್ಯಾಸ. ಆದರೆ ಇತ್ತೀಚೆಗೆ ಅದಕ್ಕೆಲ್ಲಾ ಸಮಯಾನೇ ಕೊಡ್ತಾ ಇಲ್ಲ. ಹಾಗೆ ಅಂತ ಅವುಗಳ ಜೊತೆ ಒಡನಾಟ ಏನೂ ಕಮ್ಮಿ ಆಗಿಲ್ಲ. ನನಗಿನ್ನೂ ನೆನಪಿದೆ, ಈ 'ವೈಟ್ ರಂಪ್ಡ್ ಶಾಮಾ' ಅಂತ ಒಂದು ಪಕ್ಷಿ ಇದೆ, ನಮ್ಮ ಆಶ್ರಮದ ತೋಟದಲ್ಲಿ. ಸ್ವಲ್ಪ ಅಪರೂಪದ ಪಕ್ಷಿ ಅಂತೆ ಅದು. ಆದ್ರೆ ನಾನು ಅದರ ಸುತ್ತ ಜಾಸ್ತಿ ಸಮಯ ಇದ್ದಿದ್ರಿಂದಾನೋ ಏನೋ ನಂಗೆ ಹಾಗೆ ಅನ್ನಿಸಿರ್ಲಿಲ್ಲ. ಯಾಕಂದ್ರೆ, ಎಷ್ಟೋ ಸಾರಿ ಕಾಗೆ ಸಿಗುವಷ್ಟು ಸಾಮಾನ್ಯವಾಗಿ ನಂಗೆ ಸಿಕ್ತಾ ಇತ್ತು. ಒಮ್ಮೊಮ್ಮೆ ಅಂತೂ ನಾನು ತೋಟದ ರೂಮಿನಲ್ಲಿ ಇದ್ದಾಗ ಬೆಳಿಗ್ಗೆ ಎದ್ದು ಟವೆಲ್ ತಗೊಳ್ಳಲು ಹೊರಗೆ ಬಂದ್ರೆ ಆ ಟವಲ್ ದಾರದ ಮೇಲೆ ಕೂತು ಗುಡ್ ಮಾರ್ನಿಂಗ್ ಕೂಡಾ ಹೇಳಿದೆ. ಮೊದ ಮೊದಲು ಹೇ... ಅಪರೂಪದ ಪಕ್ಷಿ ಅಂತ ಫೊಟೋ ತೆಗೆಯೋದಕ್ಕೆ ಒಳಗೆ ಓಡಿ ಫೋನ್ ತರುತ್ತಿದ್ದ ನಾನು ಕ್ರಮೇಣ ನಿದ್ದೆಗಣ್ಣಿನಲ್ಲೇ ಸಲ್ಯೂಟ್ ಮಾಡಿ ಗುಡ್ ಮಾರ್ನಿಂಗ್ ಹೇಳುತ್ತಿದ್ದೆ. ಇತ್ತೀಚೆಗೆ ತಯಾರಾಗಿ ತರಾತುರಿಯಲ್ಲಿ ನಮ್ಮ 'ಮಾಡೂ ಆಫೀಸ್' ಕಡೆಗೆ ಹೋಗುತ್ತಿದ್ದೆ. ತಕ್ಷಣ ಒಂದು ವಿಚಿತ್ರದ ಶಬ್ದ...! ಒಂದು ಸರಿಯಾದ ಪ್ಯಾಟರ್ನ್ ಇಲ್ಲ, ಮೆಲೋಡಿ ಇಲ್ಲ. ಆದರೆ ಪದೇ ಪದೇ ಕೇಳಿದರೆ ಏನೋ ಒಂದು ತರಹ ಪ್ಯಾಟರ್ನ್ ಗೆ ಹೋಲಿಕೆ ಇತ್ತು. ಇದ್ಯಾವುದೋ ವಿಚಿತ್ರ ಪಕ್ಷಿ ಇರಬೇಕು ಅಂದುಕೊಂಡೆ. ಆ ನಂತರ ಮುರಳಿ ಅಣ್ಣ ಹೇಳಿದ ಮೇಲೆ ತಿಳೀತು ಅದು ಶಾಮಾ ಪಕ್ಷಿ ಹಾಡು ಅಂತ. ಅದಾದ ಮೇಲೆ "ಹೌದಾ

ಮತ್ತೊಮ್ಮೆ ಸಿಗಲಿ ತಾಳು ನಾನು ಅದರಂತೆ ವಿಸಿಲ್ ಹಾಕಿ ರೇಗಿಸ್ತೀನಿ". ಅಂತ ಮನಸ್ಸಲ್ಲೇ ಅಂದುಕೊಂಡೆ. ಮತ್ತೊಮ್ಮೆ ಆ ಅವಕಾಶಕ್ಕೆ ನಾನೇನು ಕಾಯಬೇಕಾಗಿರಲಿಲ್ಲ. ಅದರ ಮುಂದಿನ ದಿನವೇ ಸಿಕ್ತು. ಅದು ಅಲ್ಲೆಲ್ಲೋ ದೂರದಲ್ಲಿ ಕೂತು ಸಂಗಾತಿಗಾಗಿಯೋ ಏನೋ ಕೂಗ್ತಾ ಇತ್ತು. ನಾನು ಸಿಕ್ಕಿದ್ದೇ ಚಾನ್ಸ್ ಅಂತ ಅದರಂತೆ ಪ್ಯಾಟರ್ನ್ ಇಲ್ಲದ ಪ್ಯಾಟರ್ನ್ ನಲ್ಲಿ ಕೂಗೋಕೆ ಶುರು ಮಾಡಿದೆ. ಮೊದಲನೇ ಬಾರಿಗೆ ಅದು ನನ್ನ ಕೂಗಿಗೆ ಪ್ರತಿಕ್ರಿಯಿಸುವಂತೆ ಸ್ವಲ್ಪ ಸಮಯ ತಗೊಂಡು ಕೂಗಿತ್ತು. ನಾನು ಮತ್ತೆ ಅಷ್ಟೇ ಸಮಯ ತಗೊಂಡು ಕೂಗಿದೆ. ಅದೂ ಮತ್ತೆ ಕೂಗಿತು. ಅರೇ... ಇದೊಂಥರಾ ಚೆನ್ನಾಗಿದೆ ಅಂತ ಹಾಗೇ ಆಫೀಸ್ ಕಡೆ ನಡೀತಾ... ಕೂಗ್ತಾ... ಹೋದೆ. ಆಶ್ಚರ್ಯ ಅಂದ್ರೆ, ಶಾಮಾ ಕೂಡಾ ನನ್ನ ಕೂಗಿಗೆ ಪ್ರತಿಕ್ರಿಯೆ ಕೊಡ್ತಾ ಬಂತು. ಇನ್ನೂ ಅಚ್ಚರಿ ಏನಂದ್ರೆ, ಬರಬರುತ್ತಾ ಆ ಪಕ್ಷಿ ನನ್ನ ಶಬ್ದ ಕೇಳ್ತಾ, ಇದ್ಯಾವುದೋ ಹೆಣ್ಣು ಪಕ್ಷಿ ಅಂತ ಅಂದುಕೊಂಡು ನಾನು ನಡೀತಿದ್ದ ದಾರಿಗೆ ಹತ್ರ ಬಂತು. ನೀವು ನಂಬೋದಿಲ್ಲಾ... ನಾನು ಆಶ್ರಮ ಹತ್ತಿರತ್ತಿರ ಆಗುವಷ್ಟರಲ್ಲಿ ನಾನು ನಡೀತಿದ್ದ ದಾರಿಯ ಪಕ್ಕದ ಮರದಲ್ಲಿ ಬಂದು ಕೂತು ಹಾಡುತ್ತಿತ್ತು. ಅದಾದ ನಂತರ ಯಾವುದೋ ಹೆಣ್ಣು ಪಕ್ಷಿ



ಅಂತ ತಿಳಿದಿದ್ದ ನನ್ನನ್ನ, ಇವನ್ಯಾರೋ ಮಾನವ ಮಂಗ ಚೇಷ್ಟೆ ಮಾಡ್ತಾ ಇದಾನೆ ಅಂತ ಗೊತ್ತಾಯ್ತು ಅನ್ಸತ್ತೆ, ಸನಿಹದಿಂದ ನನ್ನ ಕೂಗು ಕೇಳಿದ ಮೇಲೆ ಹೊರಟೇ ಹೋಯ್ತು. ಆದರೂ ಆ ಅನುಭವ ಇನ್ನೂ ನನ್ನ ನೆನಪಿನ ಪುಸ್ತಕದಲ್ಲಿ ಹಾಗೇ ಇದೆ.

ಆ ಸಮಯದಲ್ಲೇ ನನಗೆ ಮೂಡಿದ್ದ ಒಂದು ಪ್ರಶ್ನೆ "ಈ ಪಕ್ಷಿಗಳು ಹೀಗೆ ದಿನವಿಡೀ ಕೂಗ್ತಾ ಇರ್ತವಲ್ಲ ಬೇರೆ ಕೆಲ್ಸಾ ಇಲ್ವ? ಹಾಡು ನಿಲ್ಸೋದೇ ಇಲ್ವ? ಅಂತ." ಸಂಗಾತಿಗಾಗಿ ಅಥವಾ ಆಹಾರಕ್ಕಾಗಿ ಕೂಗುವ ಪಕ್ಷಿಗಳಿಗೂ ಒಂದು ಕೂಗು ನಿಲ್ಲಿಸುವ ಸಮಯ ಬೇಡವೇ?




ನಿದ್ದೆ ಮಾಡಬೇಡವೇ? ಖಂಡಿತಾ ಇದೆ. ಕತ್ತಲಾಗುತ್ತಿದ್ದಂತೆ ತಮ್ಮ ಗಾಯನವನ್ನು ಕ್ಷೀಣಿಸುತ್ತಾ ಮರ-ಗಿಡಗಳ ಕೊಂಬೆಗಳ ಮೇಲೆ ಅವಿತು ನಿದ್ದೆಗೆ ಜಾರುತ್ತವೆ. ಆದರೆ ದಕ್ಷಿಣ ಅಮೇರಿಕಾದಲ್ಲಿ ತಿಳಿದು ಬಂದ ವಿಚಾರ ಒಂದಿದೆ. ಮನುಷ್ಯ ಮತ್ತು ವನ್ಯಜೀವಿಗಳ ಬಗ್ಗೆ ಅಭ್ಯಾಸ ಮಾಡುವ ಗಿಲ್ಬರ್ಟ್ ಎಂಬ ವಿಜ್ಞಾನಿಯ ಸಂಶೋಧನೆಯಂತೆ, ಮುಂಚೆ ಪಕ್ಷಿಗಳು ಬೆಳಕು ಇರುವ ಸಮಯದಲ್ಲಿ ಕೂಗುತ್ತಿದ್ದ ಗರಿಷ್ಟ ಸಮಯಕ್ಕಿಂತ ಇಂದು ಸುಮಾರು 50 ನಿಮಿಷಗಳು ಹೆಚ್ಚು ಕೂಗುತ್ತಿವೆಯಂತೆ. ಕಾರಣ, ಬೆಳಕಿನ ಮಾಲಿನ್ಯ *(light pollution)*. ಹೌದು, ಬೆಳಕಿನ ಮಾಲಿನ್ಯ ಅಂತ ಕೂಡಾ ಒಂದಿದೆ. ಸ್ವಾಭಾವಿಕವಾಗಿ ದೊರೆಯುವ ಸೂರ್ಯನ ಬೆಳಕಿಗೆ ಹೋಲುವ, ರಾತ್ರಿಯನ್ನು ಬೆಳಗಿಸುವ ದಾರಿ ದೀಪಗಳು, ವಾಹನಗಳ ಬೆಳಕುಗಳು ಹೀಗೆ ಹತ್ತು ಹಲವು ಬೆಳಕಿನ ಉಪಕರಣಗಳ ಬಳಕೆಯಿಂದ ಆಗುವ ಮಾಲಿನ್ಯವನ್ನು ಬೆಳಕಿನ ಮಾಲಿನ್ಯ ಎಂದೇ ಕರೆಯುತ್ತಾರೆ. ಬೇರೆ ಎಲ್ಲಾ ಮಾಲಿನ್ಯಗಳಂತೆ ಬೆಳಕಿನ ಮಾಲಿನ್ಯವೂ ಸಹ ನಮ್ಮ ಹಾಗೂ ಇತರ ಜೀವಜಂತುಗಳ ಮೇಲೆ ಪರಿಣಾಮ ಬೀರುತ್ತದೆ. ಪಕ್ಷಿಗಳು ವಲಸೆ ಹೋಗುವ ಸಮಯದಲ್ಲಿ ಎದುರಿಸುವ ಇಂತಹ ಮಾಲಿನ್ಯಗಳಿಂದ ಅವುಗಳ ವಲಸೆಗೆ ತೊಂದರೆಯಾಗಬಹುದು, ಸಂತಾನಗಳ ಮೇಲೆ ಪರಿಣಾಮ ಬೀರಬಹುದು, ಅವುಗಳು ನಿದ್ದೆ ಮಾಡುವ ಸಮಯಗಳಲ್ಲಿ ವ್ಯತ್ಯಾಸವಾಗಿ, ಅವುಗಳ ಹಾರ್ಮೋನುಗಳ ಮೇಲೂ ಪರಿಣಾಮ ಬೀರುತ್ತದೆ ಎನ್ನುವುದಕ್ಕೆ ಪುರಾವೆಗಳಿವೆ.



ಆ ದಿಕ್ಕಿನಲ್ಲೇ ನಡೆಸಿದ ಸಂಶೋಧನೆಯಲ್ಲಿ ಗಿಲ್ಬರ್ಟ್ ಮತ್ತು ಅವರ ಸಹೋದ್ಯೋಗಿ ಬ್ರೆಂಟ್ ಬರ್ಡ್ ವೆದರ್ *(birdweather.com)* ಎಂಬ ಗ್ಲೋಬಲ್ ಸಿಟಿಜನ್ ಪ್ರಾಜೆಕ್ಟ್ ನಿಂದ ಪಡೆದ ಸುಮಾರು 583 ಪಕ್ಷಿಗಳ 4,40,000 ಕೂಗುಗಳನ್ನು ತೆಗೆದುಕೊಂಡು ಆ ಪ್ರದೇಶಗಳ ಬೆಳಕಿನ ಮಾಲಿನ್ಯದ ಜೊತೆ ಹೋಲಿಸಿದ್ದಾರೆ. ಅದರಿಂದ ತಿಳಿದು ಬಂದದ್ದು, ಅತಿ ಹೆಚ್ಚು ಬೆಳಕು ಅಥವಾ ಬೆಳಕಿನ ಮಾಲಿನ್ಯವಿದ್ದ ಜಾಗದಲ್ಲಿ ಪಕ್ಷಿಗಳು ಸರಾಸರಿ 50 ನಿಮಿಷಗಳು ಹೆಚ್ಚು ಕೂಗುತ್ತಿದ್ದವಂತೆ. ಅಂದರೆ ಸುಮಾರು 18 ನಿಮಿಷಗಳು ಬೆಳಿಗ್ಗೆ ಹಾಗೂ 32 ನಿಮಿಷಗಳು ಸಾಯಂಕಾಲ. ಹಾಗೂ ನೋಡಲು ಸ್ವಲ್ಪ ದಪ್ಪನಾದ ಕಣ್ಣುಗಳಿದ್ದ ಪಕ್ಷಿಗಳಲ್ಲಿ ಈ ಬದಲಾವಣೆ ಹೆಚ್ಚಿತ್ತಂತೆ. ಬಹುಶಃ ದಪ್ಪ ಕಣ್ಣುಗಳು ಹೆಚ್ಚು ಬೆಳಕನ್ನು ಗ್ರಹಿಸುವ ಸಾಮರ್ಥ್ಯವನ್ನು ಹೊಂದಿರುವುದರಿಂದ ಎಂದು ಕಾಣುತ್ತದೆ. ಅದರ ಜೊತೆಗೆ ಪಕ್ಷಿಗಳು ಮೊಟ್ಟೆ ಇಟ್ಟು ಮರಿ ಮಾಡುವ ಕಾಲದಲ್ಲಿ ಈ ಬೆಳಕಿನ ಮಾಲಿನ್ಯದ ಪರಿಣಾಮ ಹೆಚ್ಚಿತ್ತು. ಹಾಗಾಗಿ ಪಕ್ಷಿಗಳು ಬೆಳಿಗ್ಗೆ ಬೇಗ ಎದ್ದು ಕೂಗುತ್ತಿದ್ದದ್ದಲ್ಲದೇ, ಸಂಜೆಯ ಸಮಯದಲ್ಲಿ ಹಕ್ಕಿಗಳು ಹಾಡು ನಿಲ್ಲಿಸಲು ಮರೆತೇ ಹೋದಂತೆ ಕಾಣುತ್ತದೆ.

ಈ ಬೆಳಕಿನ ಮಾಲಿನ್ಯದ ಪರಿಣಾಮ ಪಕ್ಷಿಗಳ ಹಾಡುವಿಕೆಗೆ ಹೀಗೆ ಕಾಡುವುದರಿಂದ ಆಗುವ ಪರಿಣಾಮ ಒಳ್ಳೆಯದು ಅಥವಾ ಕೆಟ್ಟದೆಂದು ನಿರ್ಧರಿಸಲು ಈಗ ಆಗದಿರಬಹುದು. ಆದರೆ ನಮ್ಮ ಜೀವನದಲ್ಲಿ ನಾವು ಅಳವಡಿಸುವ ಬದಲಾವಣೆಗಳ ಅರಿವೇ ಇಲ್ಲದೆ ಮಾಡುವ ಕಾರ್ಯಗಳು ನಮ್ಮ ಊಹೆಗೆ ಮೀರಿ ಹೀಗೆ ಉಳಿದ ಜೀವಿಗಳ ಮೇಲೆ ಬೀರುತ್ತಿರುವ ಪರಿಣಾಮಗಳ ಅಂಚನೆಯು ನಮ್ಮಲ್ಲಿಲ್ಲ ಎನ್ನುವುದು ವಾಸ್ತವ. ಹಾಗಾದರೆ ನಮಗೆ ಬೇಕಾದ ಹಾಗೆ ಬದುಕುವ ಹಾಗೇ ಇಲ್ಲವೇ? ಎಂಬ ಪ್ರಶ್ನೆಗೆ ನನ್ನ ಅನಿಸಿಕೆಯುತ್ತರ, "ಖಂಡಿತಾ ಇದೆ! ಆದರೆ ನಮ್ಮ ಜೀವನ ಕೇವಲ ನಮ್ಮದಲ್ಲ, ಬರಿಯ ಸ್ವಾರ್ಥದ ಬದುಕಲ್ಲ ನಮ್ಮದು. ಸಹಬಾಳ್ವೆಯ ನಿದರ್ಶನವದು. ಸಹಿಸಿ, ಗೌರವಿಸಿ, ಸಹನೆಯದಿ ಬಾಳುವ ಜೀವನದ ಪುರಾವೆಯದು. ಈ ಸತ್ಯದ ಅರಿವು ಸದಾ ಮನದಲ್ಲಿಟ್ಟು, ನಾವು ಜೀವಕೋಟಿಗಳಲ್ಲೊಂದು ಜೀವ ಎಂದು ನೆನಪಿಸುವ ಅಭಿಮಾನದ ಜೀವನವಾಗಬೇಕದು."



**ಲೇಖನ: ಜೈಕುಮಾರ್ ಆರ್.**

**ಬೆಂಗಳೂರು ನಗರ ಜಿಲ್ಲೆ**

**ource: www.snexplores.org**

# ಕಾನನದ ಆರ್ತನಾದ

ನನ್ನೊಡಲೊಳಗೆ ಕಗ್ಗತ್ತಲು ಕವಿದಿದೆ
ಜೀವ ಜಂತುಗಳು ಮೆರೆದಾಡುತ್ತಿವೆ
ಅಷ್ಟೋ ಇಷ್ಟೋ ಎಷ್ಟೋ ಸಾಧ್ಯವಾದಷ್ಟು
ಸಿಕ್ಕಿದ್ದು ಸವಿದು ಮಲಗುತ್ತವೆ

ಆದರೆ ಈಗ ನಾನು ನಾನಾಗಿಲ್ಲ
ಪಚ್ಚೆ ಸೀರೆ ಕದ್ದು ಹರಿದು ಬೆತ್ತಲೆಗೊಳಿಸಿಹರು
ಅಭಿವೃದ್ಧಿಯ ನಾಮ ಕಟ್ಟಿ ಅತ್ಯಾಚಾರವೆಸಗುತಿಹರು
ಬೋಳಿಸಿ ಬರಿಗೈ ಮಾಡಿ ವಿಕೃತಿ ಮೆರೆವರು

ಮನಬಿಚ್ಚಿ ಅರಳುವ ಕುಸುಮ ಕಣ್ಮರೆಯಾಗುತ್ತಿವೆ
ನಲಿದಾಡಿ ಬರುವ ಪತಂಗ ನಶಿಸುತ್ತಿವೆ
ನಳನಳಿಸುವ ಝುರಿಯ ನರ್ತನ ಕುಸಿದಿದೆ
ಚಿಲಿಪಿಲಿ ಕಲರವ ಮಾಯವಾಗುತ್ತಿದೆ

ಆನೆ-ಸಾರಂಗ ಹುಲಿ-ಸಿಂಹ ಕಂಗೆಟ್ಟು ನಾಡಿಗೆ ನುಗ್ಗಿವೆ
ಕಾವು ಏರುತ್ತಿದೆ ವಿಕಿರಣ ಸೂಸುತ್ತಿದೆ
ತುಂಬಿದ್ದ ಸಂಪತ್ತು ಬಟಾಬಯಲಾಗುತ್ತಿದೆ
ಬಂಜೆಮಾಡಿ ಬಡಿವಾರ ಮಾಡುತಿಹರು

ಅಲ್ಲಲ್ಲಿ ಎದೆಮೇಲೆ ಬರೆ ಎಳೆಯುತಿಹರು
ಹೊಟ್ಟೆಯೊಳಗೆ ಸಿಡಿಮದ್ದು ಸಿಡಿಸುತಿಹರು
ಸೆರಗಂಚಿಗೆ ಬೆಂಕಿ ಹಚ್ಚಿ ಮನೆ ಕಟ್ಟುತಿಹರು
ಇದೋ! ನನ್ನ ಆರ್ತನಾದ, ಇನ್ನಾದರೂ ಉಳಿಸಿ ಬೆಳೆಸಿ ರಕ್ಷಿಸಿ

- ರಾಮಲಿಂಗ ಮಾಡಗಿರಿ
ರಾಯಚೂರು ಜಿಲ್ಲೆ

© ಹೂರ್ ಬಾನು

# ಪ್ರಕೃತಿ ಬಿಂಬ



**ಕಪ್ಪು ಕಿತ್ತಳೆ ನೊಣಹಿಡುಕ** © ಶ್ರೀಕಾಂತ್ ಎ. ವಿ.

ದಕ್ಷಿಣ ಭಾರತದ ಪಶ್ಚಿಮ ಘಟ್ಟಗಳ ಶೋಲಾ ಹುಲ್ಲುಗಾವಲುಗಳು ಮತ್ತು ಕಾಡುಗಳಿಗೆ ಸ್ಥಳೀಯವಾಗಿರುವ ಈ ಸಣ್ಣ ಪ್ರಕಾಶಮಾನವಾದ ಬಣ್ಣದ ಪಕ್ಷಿಯು ಮಸ್ಸಿಕಾಪಿಡೆ (Muscicapidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಫಿಸೆಡುಲಾ ನಿಗ್ರೊರುಫಾ (Ficedula nigrorufa) ಎಂದು ಕರೆಯಲಾಗುತ್ತದೆ. ಗಂಡು ಹಕ್ಕಿಯು ಕಪ್ಪು ತಲೆ ಮತ್ತು ರೆಕ್ಕೆಗಳನ್ನು ಹೊಂದಿದ್ದು, ಕೆಂಪಗಿನ ಬೆನ್ನು ಮತ್ತು ಕಿತ್ತಳೆ ಬಣ್ಣದ ತಳಭಾಗವನ್ನು ಹೊಂದಿರುತ್ತದೆ. ಹೆಣ್ಣು ಹಕ್ಕಿಯು ಗಾಢ ಕಂದು ಬಣ್ಣದ ತಲೆ ಮತ್ತು ರೆಕ್ಕೆಗಳನ್ನು ಹೊಂದಿದ್ದು, ಕಣ್ಣಿನ ಸುತ್ತ ತೆಳುವಾದ ಉಂಗುರದ ಆಕಾರವನ್ನು ಹೊಂದಿರುತ್ತದೆ. ಹೆಣ್ಣು ಹಕ್ಕಿ ಪೊದೆ ಅಥವಾ ಜರೀಗಿಡದಲ್ಲಿ ಗೂಡನ್ನು ನಿರ್ಮಿಸಿ, ಎರಡು ಬೂದು ಬಣ್ಣದ ಚುಕ್ಕೆಗಳುಳ್ಳ ಮೊಟ್ಟೆಗಳನ್ನು ಇಡುತ್ತದೆ. ಮರಿ ಹಕ್ಕಿಗಳು ಕಂದು ಬಣ್ಣವಿದ್ದು, ಚುಕ್ಕೆಗಳಿಂದ ಕೂಡಿರುತ್ತವೆ. ಈ ಹಕ್ಕಿಗಳು ನೆಲದ ಸಮೀಪ ಹಾರುತ್ತಾ ಕೀಟಗಳನ್ನು ಹಿಡಿದು ತಿನ್ನುತ್ತವೆ ಹಾಗೂ ನೇರವಾಗಿ ನೆಲದಿಂದಲೂ ಕೂಡ ಕೀಟಗಳನ್ನು ಹೆಕ್ಕಿ ತಿನ್ನುತ್ತವೆ. ಮುಂಜಾನೆ ಮತ್ತು ಸಂಜೆ ವೇಳೆಯಲ್ಲಿ ಗಂಟೆಗೆ ಸುಮಾರು 100 ಕೀಟಗಳನ್ನು ಹಿಡಿದು ತಿನ್ನುವ ಸಾಮರ್ಥ್ಯ ಇವುಗಳಿಗಿವೆ!



**ಕಂದು ಮೀನು ಗೂಬೆ** © ಶ್ರೀಕಾಂತ್ ಎ. ವಿ.

ದಕ್ಷಿಣ ಮತ್ತು ದಕ್ಷಿಣ ಪೂರ್ವ ಏಷ್ಯದ ವಿವಿಧ ಭಾಗಗಳ ಕಾಡುಗಳು ಮತ್ತು ಜೌಗು ಪ್ರದೇಶಗಳಲ್ಲಿ, ಹಾಗೂ ನದಿಗಳು, ಸರೋವರಗಳು ಮತ್ತು ಕೊಳಗಳಂತಹ ಜಲಮೂಲಗಳ ಬಳಿ ಕಂಡುಬರುತ್ತದೆ. ಈ ನಿಶಾಚರಿ ಹಕ್ಕಿಯು ಸ್ಟ್ರಿಗಿಡೇ (Strigidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಕೆಟುಪ ಜೈಲೋನೆನ್ಸಿಸ್ (Ketupa zeylonensis) ಎಂದು ಕರೆಯಲಾಗುತ್ತದೆ. ಕಂದು ಬಣ್ಣದ ಮೀನು ಗೂಬೆಯು ದಟ್ಟವಾದ ಗರಿಗಳಿಂದ ಕೂಡಿದ ಕಿವಿಯನ್ನು ಪ್ರಧಾನವಾಗಿ ಹೊಂದಿದೆ ಹಾಗು ಮೇಲ್ಭಾಗದಲ್ಲಿ ಕಪ್ಪು ಮತ್ತು ಕಡುಗಂದು ಬಣ್ಣದ ಗೆರೆಗಳನ್ನು ಹೊಂದಿದೆ. ಒಂಟಿಯಾಗಿ ಅಥವಾ ಜೋಡಿಗಳಲ್ಲಿ, ಹೊಳೆ, ಕೆರೆಗಳ ಹತ್ತಿರದ ದೊಡ್ಡ ದೊಡ್ಡ ಮರಗಳ ಮೇಲೆ ಕುಳಿತಿರುತ್ತವೆ. 'ಊಹೊಽ' ಎಂದು ಹೂಂಕರಿಸಿದಂತೆ ನೀಳವಾಗಿ ಕೂಗುತ್ತದೆ ಹಾಗೂ ಹಗಲೆಲ್ಲಾ ದೊಡ್ಡ ಮರಗಳ ಎಲೆಗಳ ನಡುವೆ ನಿದ್ರಿಸುತ್ತದೆ. ಮೀನು, ಏಡಿ, ಹಕ್ಕಿಗಳು, ಕಪ್ಪೆ, ಮೊಲ ಇತ್ಯಾದಿಗಳನ್ನು ಬೇಟೆಯಾಡುತ್ತದೆ. ಹಳೆಯ ಮರಗಳ ಪೊಟರೆಗಳಲ್ಲಿ ಮತ್ತು ಪರ್ವತ ಶಿಖರಗಳ ಬಂಡೆ ಬಿರುಕಿನಲ್ಲಿ ಗೂಡು ಮಾಡಿ ಕೆನೆ ಬಣ್ಣದ ಒಂದು ಅಥವಾ ಎರಡು ಮೊಟ್ಟೆಗಳನ್ನು ಇಟ್ಟು ಮರಿ ಮಾಡುತ್ತದೆ.



**ನೀಲಗಿರಿ ನೊಣಹಿಡುಕ** © ಶ್ರೀಕಾಂತ್ ಎ. ವಿ.

ಪಶ್ಚಿಮ ಘಟ್ಟ ಮತ್ತು ನೀಲಗಿರಿಗಳ ಶೋಲಾ ಕಾಡುಗಳ ಎತ್ತರದ ಪ್ರದೇಶಗಳಲ್ಲಿ ಕಂಡುಬರುವ ಈ ನೀಲಗಿರಿ ನೊಣಹಿಡುಕ ಮಸ್ಸಿಕಾಪಿಡೆ (Muscicapidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಯುಮಿಯಾಸ್ ಅಲ್ಬಿಕಾಡಾಟಸ್ (Eumyias albicaudatus) ಎಂದು ಕರೆಯಲಾಗುತ್ತದೆ. ಇದರ ಮೈಬಣ್ಣವು ಗಾಢ ಇಂಡಿಗೋ ನೀಲಿ ಬಣ್ಣದ್ದಾಗಿದ್ದು, ಹಣೆಯು ನೇರಳೆ ನೀಲಿ ಬಣ್ಣದಲ್ಲಿರುತ್ತದೆ. ಹೆಣ್ಣು ಹಕ್ಕಿ ಮಂದ ಬಣ್ಣದಲ್ಲಿದ್ದು, ಮೇಲ್ಭಾಗವು ಗಾಢ ಕಂದು ಮತ್ತು ಕೆಳಗಿನ ಭಾಗವು ಗಾಢ ಬೂದು ಬಣ್ಣದಲ್ಲಿರುತ್ತದೆ. ಈ ಹಕ್ಕಿಗಳು ನೆಲದ ಸಮೀಪ ಹಾರುತ್ತಾ ಕೀಟಗಳನ್ನು ಹಿಡಿದು ತಿನ್ನುತ್ತವೆ. ಕೆಲವೊಮ್ಮೆ ಮರಗಳ ಮೇಲಾವರಣದಲ್ಲೂ ಕಂಡು ಬರುತ್ತವೆ. ಗೂಡನ್ನು ದಂಡೆಗಳಲ್ಲಿ ಅಥವಾ ಮರದ ರಂಧ್ರದ ಕುಳಿಯಲ್ಲಿ ನಿರ್ಮಿಸುತ್ತವೆ. ಗೂಡು ಬಟ್ಟಲಿನಂತಿದ್ದು, ಹೊರಭಾಗದಲ್ಲಿ ಪಾಚಿ, ಕಲ್ಲುಹೂವುಗಳು ಮತ್ತು ಗರಿಗಳನ್ನು ಹೊಂದಿರುತ್ತದೆ. ಸಾಮಾನ್ಯವಾಗಿ ಎರಡರಿಂದ ಮೂರು ಕೆನೆ ಕಂದು ಬಣ್ಣದ್ದ ಮೊಟ್ಟೆಗಳನ್ನು ಇಡುತ್ತವೆ ಹಾಗೂ ಮೊಟ್ಟೆಯ ಅಗಲವಾದ ಭಾಗದಲ್ಲಿ ದಟ್ಟವಾದ ಮಚ್ಚೆಯಿರುತ್ತದೆ.



**ತರಗುಹಕ್ಕಿ** © ಶ್ರೀಕಾಂತ್ ಎ. ವಿ.

ದಕ್ಷಿಣ ಮತ್ತು ಆಗ್ನೇಯ ಏಷ್ಯಾದ ತೇವಾಂಶವುಳ್ಳ ಎಲೆ ಉದುರುವ ಮತ್ತು ನಿತ್ಯಹರಿದ್ವರ್ಣ ಕಾಡುಗಳಲ್ಲಿ, ವಿಶೇಷವಾಗಿ ಬೆಟ್ಟಗಳಲ್ಲಿ ಕಂಡುಬರುವ ಈ ತರಗುಹಕ್ಕಿಯು ಲಿಯೋಥ್ರಿಚಿಡೆ (Leiothrichidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಆಲ್ಸಿಪ್ಪೆ ಪೊಯೊಯಿಸೆಫಾಲಾ (*Alcippe poioicephala*) ಎಂದು ಕರೆಯಲಾಗುತ್ತದೆ. ಇದೊಂದು ಮಂದ ಬಣ್ಣದ ಪುಟ್ಟ ಹಕ್ಕಿಯಾಗಿದೆ. ಬಹಳ ಚಿಕ್ಕದಾದ ನಯವಾದ ಕೊಕ್ಕನ್ನು ಹೊಂದಿದ್ದು, ಗರಿಗಳು ಕಂದು ಬಣ್ಣ ಮತ್ತು ತಲೆಯ ಮೇಲ್ಭಾಗವು ಬೂದು ಬಣ್ಣದಲ್ಲಿರುತ್ತದೆ. ಕಾಡಿನ ಪೊದೆಗಳಲ್ಲಿ ಅಥವಾ ಎಲೆಗಳ ಮಧ್ಯೆ ಕೀಟಗಳನ್ನು ಹುಡುಕಿ ತಿನ್ನುತ್ತವೆ. ಕೆಲವೊಮ್ಮೆ ಸಣ್ಣ ಹಣ್ಣುಗಳು ಮತ್ತು ಮಕರಂದವನ್ನೂ ಸಹ ತಮ್ಮ ಆಹಾರವಾಗಿ ಸೇವಿಸುತ್ತವೆ. ಗೂಡು ಬಟ್ಟಲಿನಾಕಾರದಲ್ಲಿದ್ದು, ಪಾಚಿ, ಬೇರುಗಳು, ಕಲ್ಲುಹೂವು, ಎಲೆಗಳು ಮತ್ತು ಹುಲ್ಲಿನಿಂದ ಮುಚ್ಚಲ್ಪಟ್ಟಿರುತ್ತದೆ. ಇದನ್ನು ನೆಲದಿಂದ ಸರಾಸರಿ 2 ಅಡಿ ಎತ್ತರದಲ್ಲಿನ ಫೋರ್ಕ್ ಆಕಾರದ ಕೊಂಬೆಗಳ ಮಧ್ಯೆ ಇರಿಸಿರುತ್ತದೆ ಅಥವಾ ತೂಗುಬಿಟ್ಟಿರುತ್ತದೆ. ಎರಡರಿಂದ ಮೂರು ಮೊಟ್ಟೆಗಳನ್ನು ಇಟ್ಟು ಮರಿ ಮಾಡುತ್ತದೆ.

**ಚಿತ್ರ: ಶ್ರೀಕಾಂತ್ ಎ. ವಿ.**
**ಲೇಖನ: ದೀಪ್ತಿ ಎನ್.**

# ನೀವೂ ಕಾನನಕ್ಕೆ ಬರೆಯಬಹುದು



ಹಿಮಕರಡಿ ಎಂದಾಕ್ಷಣ ನಮ್ಮ ಮನಸ್ಸಿನಲ್ಲಿ ಮೂಡುವ ಚಿತ್ರಣ, ಹಿಮಕರಡಿ ತನ್ನ ಮರಿಯೊಂದಿಗೆ ಕರಗುತ್ತಿರುವ ಸಮುದ್ರ ಹಿಮದ ಮೇಲೆ ನೆಲೆಯನ್ನು ಹುಡುಕುತ್ತಾ ನಿಂತಿರುವ ದೃಶ್ಯ. ಹೌದು, ಜಾಗತಿಕ ತಾಪಮಾನ ಏರಿಕೆಯಿಂದ ಆರ್ಕ್ಟಿಕ್ ಪ್ರದೇಶದ ಸಮುದ್ರ ಹಿಮ ವೇಗವಾಗಿ ಕರಗುತ್ತಿದ್ದು, ಹಿಮಕರಡಿಗಳ ಆವಾಸಕ್ಕೆ ಗಂಭೀರ ಸಂಕಷ್ಟ ಎದುರಾಗುತ್ತಿದೆ. ಹಿಮಕರಡಿ ವಿಶ್ವದಲ್ಲೇ ಅತಿ ದೊಡ್ಡ ಗಾತ್ರದ ನೆಲವಾಸಿ ಮಾಂಸಾಹಾರಿ ಪ್ರಾಣಿಯಾಗಿದ್ದು, ಆರ್ಕ್ಟಿಕ್ ವೃತ್ತ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾಸಿಸುತ್ತದೆ. ಮಾನವ ವಾಸಸ್ಥಳಗಳ ಹಸ್ತಕ್ಷೇಪ ಕಡಿಮೆಯಿರುವುದರಿಂದ, ಇತರೆ ದೊಡ್ಡ ಮಾಂಸಾಹಾರಿ ಪ್ರಾಣಿಗಳಿಗಿಂತ ಹಿಮಕರಡಿಗಳು ತಮ್ಮ ಮೂಲ ವ್ಯಾಪ್ತಿಯ ಹೆಚ್ಚಿನ ಭಾಗವನ್ನು ಇನ್ನೂ ಉಳಿಸಿಕೊಂಡಿವೆ. ಹಿಮಕರಡಿಗಳು ವಾಸಿಸುವ ಪ್ರದೇಶಗಳು ಮಾನವನ ವಾಸಸ್ಥಾನಗಳಿಂದ ತುಂಬಾ ದೂರವಿದ್ದು, ಮಾನವನು ಹೊಂದುಕೊಳ್ಳಲಾಗದಂತಹ ಅತಿ ಕಠಿಣ ಹವಾಮಾನ ಹೊಂದಿರುವುದರಿಂದ ಅವುಗಳ ನಿಖರ ಸಂಖ್ಯೆಯನ್ನು ಲೆಕ್ಕ ಹಾಕುವುದು ಸುಲಭವಲ್ಲ. ಆದರೆ ವಿಜ್ಞಾನಿಗಳ ಅಂದಾಜಿನ ಪ್ರಕಾರ, ವಿಶ್ವಾದ್ಯಂತ ಸುಮಾರು 20,000 ರಿಂದ 25,000 ಹಿಮಕರಡಿಗಳಿವೆ. ಜಾಗತಿಕ ತಾಪಮಾನ ಏರಿಕೆಯಿಂದಾಗಿ ಕೆಲವು ಪ್ರದೇಶಗಳಲ್ಲಿ ಹಿಮಕರಡಿಗಳ ಸಂಖ್ಯೆ ನಿಧಾನವಾಗಿ ಕಡಿಮೆಯಾಗುತ್ತಿದೆ. ಈ ಸಮಸ್ಯೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಪ್ರತಿವರ್ಷ ಫೆಬ್ರವರಿ **27ರಂದು “ಅಂತರಾಷ್ಟ್ರೀಯ ಹಿಮಕರಡಿ ದಿನ”** ಎಂದು ಆಚರಿಸಲಾಗುತ್ತದೆ. ಈ ದಿನ ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳು ಹಿಮಕರಡಿಗಳನ್ನು ರಕ್ಷಿಸುವುದಕ್ಕಾಗಿ ವಿವಿಧ ಕಾರ್ಯಕ್ರಮಗಳನ್ನು ಮತ್ತು ಕ್ರಮಗಳನ್ನು ಕೈಗೊಳ್ಳುತ್ತವೆ.

ಈ ರೀತಿಯ ಪರಿಸರದ ಬಗೆಗಿನ ಮಾಹಿತಿಯನ್ನು ಒದಗಿಸಲು ಇರುವ ಕಾನನ ಇ-ಮಾಸಿಕಕ್ಕೆ ಮುಂದಿನ ತಿಂಗಳ ಸಂಚಿಕೆಗೆ ಲೇಖನಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ಪರಿಸರಕ್ಕೆ ಸಂಬಂಧಿಸಿದ ಕಥೆ, ಕವನ, ಛಾಯಾಚಿತ್ರ, ಚಿತ್ರಕಲೆ, ಪ್ರವಾಸ ಕಥನಗಳನ್ನು ಕಾನನ ಮಾಸಿಕದ ಇ-ಮೇಲ್ ವಿಳಾಸಕ್ಕೆ ಕಳುಹಿಸಬಹುದು.

**ಕಾನನ ಪತ್ರಿಕೆಯ ಇ-ಮೇಲ್ ವಿಳಾಸ**: kaanana.mag@gmail.com

**ಅಂಚೆ ವಿಳಾಸ**:

ವೈಲ್ಡ್ ಲೈಫ್ ಕನ್ಸರ್ವೇಷನ್ ಗ್ರೂಪ್,
ಅಡವಿ ಫೀಲ್ಡ್ ಸ್ಟೇಷನ್,
ಒಂಟೆಮಾರನ ದೊಡ್ಡಿ, ರಾಗಿಹಳ್ಳಿ ಅಂಚೆ,
ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ,
ಪಿನ್ ಕೋಡ್ : 560083. ಗೆ ಕಳಿಸಿಕೊಡಬಹುದು.



# ಪರಿಸರದ ಬಗೆಗಿನ ಏಕೈಕ ಕನ್ನಡ ಇ–ಮಾಸಿಕಕ್ಕೆ ನೀವೂ ಸಹ ಕೈ ಜೋಡಿಸಿ

## Join hands with the only Kannada e-magazine on environment

**ಕಾನನ ಪತ್ರಿಕೆಯು ಹಲವಾರು ಸ್ವಯಂ ಸೇವಕರ ಸಹಾಯದಿಂದ ಯಶಸ್ವಿಯಾಗಿ ೧೫ ವರ್ಷಗಳಿಂದ ಪ್ರಕಟವಾಗುತ್ತಿದ್ದರೂ, ಅದರ ನಿರ್ವಹಣೆಗೆ (website) ಸ್ವಲ್ಪ ವೆಚ್ಚ ತಗುಲುತ್ತದೆ. ಆದ ಕಾರಣ ಸಹಾಯ ಮಾಡಲು ಇಚ್ಚಿಸುವ ದಾನಿಗಳು ದೇಣಿಗೆ ನೀಡುವ ಮೂಲಕ ಪ್ರೋತ್ಸಾಹಿಸಿ ಸಹಕರಿಸಬಹುದು.**

**With the help of many volunteers kaanana is reaching thousands of readers from past 15 years. But it requires some amount for its maintenance. Hence we request interested candidates to support kaanana by donating.**

**Account details are as below ***

**Bank Name: Bank of Baroda**
**Account type: Current account**
**Account no: 67560200001138**
**Account Name: Wildlife Conservation Group**
**IFSC Code: BARB0VJRAGI (zero in middle)**

**SCAN TO PAY**
**WITH ANY BHIM UPI APP**
Merchant Name : WILDLIFE CONSERVATION GROUP



***- Donations are exempted from Income Tax under section 80 G (IT act 1961)**